ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक-संस्कृत-विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## ದಿನಾಂಕ: 14.08.2024ರಂದು ನಡೆದ ಪ್ರಶಾಸನ ಸಮಿತಿಯ 71ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ 71ನೆಯ ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ದಿನಾಂಕ: 14-08-2024** ಬುಧವಾರ ಬೆಳಿಗ್ಗೆ 11.30 ಗಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಕರೆಯಲಾಗಿತ್ತು.

**ಸಭೆಯಲ್ಲಿ ಹಾಜರಿದ್ದರು:**

1. ಡಾ. ಅಹಲ್ಯಾ ಎಸ್., ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಅಧ್ಯಕ್ಷರು
2. ಶ್ರೀ ಏಕೇಶ ಬಾಬು, ಉಪಕಾರ್ಯದರ್ಶಿಗಳು, ಉನ್ನತಶಿಕ್ಷಣ ಇಲಾಖೆ – ಸದಸ್ಯರು
3. ಪ್ರೊ. ರಜನೀಶ ಕುಮಾರ ಮಿಶ್ರ, ಸಂಸ್ಕೃತ ಮತ್ತು ಇಂಡಿಕ್ ಅಧ್ಯಯನ ವಿಭಾಗ, ಜವಾಹರಲಾಲ ನೆಹರು ವಿಶ್ವವಿದ್ಯಾಲಯ, ನವದೆಹಲಿ – 110067 – ಸದಸ್ಯರು
4. ಡಾ. ಆರ್. ಶ್ರೀಧರ ಶಾಸ್ತ್ರಿ ಸೂರಿ, ಪ್ರಾಧ್ಯಾಪಕರು(ನಿ), ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು – ಸದಸ್ಯರು
5. ಶ್ರೀಮತಿ ಸಮತಾ ಹೊಸಪೇಟೆ, "ಬಾಲಾಜಿ", ಕುವೆಂಪು ನಗರ ಬಸ್ ನಿಲ್ದಾಣದ ಎದುರುಗಡೆ, ಹನುಮಾನ್ ನಗರ, ಬೆಳಗಾವಿ – 19 – ಸದಸ್ಯರು
6. ಶ್ರೀ ವಿಶ್ವನಾಥ ಪಿ. ಹಿರೇಮಠ, ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ. – ಸದಸ್ಯ ಕಾರ್ಯದರ್ಶಿಗಳು

**ಗೈರು ಹಾಜರಾದವರು:**

1. ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ – ಸದಸ್ಯರು
2. ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ(ಮುಜರಾಯಿ) – ಸದಸ್ಯರು
3. ಮಹಾ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ – ಸದಸ್ಯರು
4. ಶ್ರೀ ಪ್ರದೀಪ್ ಈಶ್ವರ್, ಮಾನ್ಯ ವಿಧಾನಸಭಾ ಸದಸ್ಯರು, ಚಿಕ್ಕಬಳ್ಳಾಪುರ ವಿಧಾನ ಸಭಾ ಕ್ಷೇತ್ರ, ನಂ–516, ಪೆರೇಸಂದ್ರ ಗ್ರಾಮ, ಚಿಕ್ಕಬಳ್ಳಾಪುರ ತಾಲ್ಲೂಕು, ಚಿಕ್ಕಬಳ್ಳಾಪುರ- 562104. – ಸದಸ್ಯರು

ಸಭೆಯ ಆರಂಭದಲ್ಲಿ ಕುಲಸಚಿವರು ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನೂ ಸ್ವಾಗತಿಸಿದರು. ನಂತರ ಕಾರ್ಯಸೂಚಿಯಂತೆ ವಿಷಯವಾರು ಚರ್ಚಿಸಿ ನಿರ್ಣಯ ಕೈಗೊಳ್ಳಲಾಯಿತು.

| ವಿ.ಸಂ. | **ವಿಷಯ ಮತ್ತು ಟಿಪ್ಪಣಿ** |
|---|---|
| **ವಿಷಯ 01** | **ಪ್ರಶಾಸನ ಸಮಿತಿ 69ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗ್ಗೆ.** |
| **ಟಿಪ್ಪಣಿ** | ಪ್ರಶಾಸನ ಸಮಿತಿ 69ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 07.03.2024ರಂದು ನಡೆಯಿತು. ಸಭೆಯ ನಿರ್ಣಯದ ಅನುಪಾಲನಾ ವರದಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| **ನಿರ್ಣಯ** | ದಿನಾಂಕ: 07.03.2024ರಂದು ನಡೆದ ಪ್ರಶಾಸನ ಸಮಿತಿ 69ನೇ ಸಭೆಯ ನಿರ್ಣಯದ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು. |

| | |
|---|---|
| **ವಿಷಯ 02** | **ಹಣಕಾಸು ಸಮಿತಿ 47ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ.** |
| **ಟಿಪ್ಪಣಿ** | ದಿನಾಂಕ: 11.07.2024ರಂದು ನಡೆದ ಹಣಕಾಸು ಸಮಿತಿ 47ನೇ ಸಭೆಯ ನಡಾವಳಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| **ನಿರ್ಣಯ** | ದಿನಾಂಕ: 11.07.2024ರಂದು ನಡೆದ ಹಣಕಾಸು ಸಮಿತಿ 47ನೇ ಸಭೆಯ ನಡಾವಳಿಯನ್ನು ಸಭೆಯು ಅನುಮೋದಿಸಿತು. |
| **ವಿಷಯ 03** | **ಪ್ರಶಿಕ್ಷಣ ಪರಿಷತ್ತಿನ 40ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ.** |
| **ಟಿಪ್ಪಣಿ** | ದಿನಾಂಕ: 13.08.2024ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 40ನೇ ಸಭೆಯ ನಡಾವಳಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| **ನಿರ್ಣಯ** | ದಿನಾಂಕ: 13.08.2024ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 40ನೇ ಸಭೆಯ ನಡಾವಳಿಯನ್ನು ಸಭೆಯು ಅನುಮೋದಿಸಿತು. |
| **ವಿಷಯ 04** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಅಧಿಕ ಪ್ರಭಾರದಲ್ಲಿರಿಸಿರುವುದಕ್ಕೆ ಪ್ರಶಾಸನ ಸಮಿತಿಯ ಘಟನೋತ್ತರ ಅನುಮೋದನೆಯನ್ನು ನೀಡುವ ಬಗೆಗೆ.** |
| **ಟಿಪ್ಪಣಿ** | ತುಮಕೂರು ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಸುರೇಶ ಬಿ.ಕೆ. –ಇವರನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಉಪ ಕುಲಸಚಿವರು (ಪ್ರ) ಹುದ್ದೆಗೆ ನಿಯೋಜನೆ ಮಾಡಿ ಆದೇಶಿಸಲಾಗಿತ್ತು. ಸದರಿಯವರನ್ನು ದಿ: 02.05.2024ರಂದು ಉಪ ಕುಲಸಚಿವರ ಹುದ್ದೆಯ ಪ್ರಭಾರ ಕರ್ತವ್ಯದಿಂದ ಬಿಡುಗಡೆಗೊಳಿಸಿ ಆದೇಶಿಸಲಾಗಿದ್ದು, ಪ್ರಸ್ತುತ ಉಪ ಕುಲಸಚಿವರ ಹುದ್ದೆಯು ಖಾಲಿ ಇರುವುದರಿಂದ, ವಿಶ್ವವಿದ್ಯಾಲಯದ ಕಾರ್ಯಗಳ ಸುಗಮ ನಿರ್ವಹಣೆಗಾಗಿ ಡಾ. ವೆಂಕಟೇಶ ವಿ., ಹಿರಿಯ ಸಹಾಯಕ ಕುಲಸಚಿವರು ಇವರನ್ನು (ಆದೇಶ ಸಂಖ್ಯೆ: ಕಸಂವಿ/ಸಿಬ್ಬಂದಿ.ಬೋಧಕೇತರ/ಸ.ಕು–01/2015–16/31, ದಿ: 02.05.2024) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಉಪ ಕುಲಸಚಿವರು** ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿ ಇರಿಸಿ ಆದೇಶಿಸಿದೆ.<br>ಹಣಕಾಸು ವಿಭಾಗದಲ್ಲಿ ಹೆಚ್ಚುವರಿ ಕೆಲಸ ಕಾರ್ಯಗಳ ನಿರ್ವಹಣೆಗೆ ಅನುಕೂಲವಾಗುವಂತೆ ವಿದ್ವಾನ್ ಶಿವಮೂರ್ತಿ ಎಂ. ಸಹಾಯಕ ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಉಪ ಹಣಕಾಸು ಅಧಿಕಾರಿ** ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿರಿಸಿ ಆದೇಶಿಸಿದೆ.<br>ಡಾ. ಸಂತೋಷ್ ಸುಭಾಸ್ ಹಾನಗಲ್ಲ, ಉಪ ನಿರ್ದೇಶಕರು, ಕಸಂವಿ ಇವರು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕರ್ನಾಟಕ ಸರ್ಕಾರ, ಬೆಂಗಳೂರು ಇಲ್ಲಿಗೆ ಕಾರ್ಯದರ್ಶಿಗಳಾಗಿ ನಿಯೋಜನೆ ಗೊಂಡಿರುವುದರಿಂದ **ಉಪ ನಿರ್ದೇಶಕರ** ಹುದ್ದೆಯು ಖಾಲಿಯಾಗಿದ್ದು, ಈ ಹುದ್ದೆಗೆ ಡಾ. ಮಲ್ಲನಗೌಡ ಎಸ್., ಸಹಾಯಕ ನಿರ್ದೇಶಕರು (ಪ್ರಸಾರಾಂಗ), ಕಸಂವಿ ಇವರನ್ನು ಅಧಿಕ ಪ್ರಭಾರದಲ್ಲಿರಿಸಿ ಆದೇಶಿಸಿದೆ.<br>ಶ್ರೀ ಮಹಾವೀರ್, ಸಿಸ್ಟಂ ಅನಾಲಿಸ್ಟ್, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರು ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ, ಬೆಂಗಳೂರು ಇಲ್ಲಿಗೆ ಉಪ ನಿರ್ದೇಶಕರಾಗಿ ನಿಯೋಜನೆ ಮೇಲೆ ತೆರಳಿದ್ದು ಪ್ರಸ್ತುತ ಸಿಸ್ಟಂ ಅನಾಲಿಸ್ಟ್ ಹುದ್ದೆಯು ಖಾಲಿ ಇರುತ್ತದೆ. IT Cell ನಲ್ಲಿ ಕೆಲಸ ಕಾರ್ಯಗಳು ತ್ವರಿತಗತಿಯಲ್ಲಿ ನಿರ್ವಹಿಸಲು ಅನುಕೂಲವಾಗುವಂತೆ ಶ್ರೀ ನಾಗೇಂದ್ರ ಮೂರ್ತಿ ಆರ್., ಕಂಪ್ಯೂಟರ್ ಆಪರೇಟರ್, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರಿಗೆ ಈಗಿರುವ ಹುದ್ದೆಯ ಜವಾಬ್ದಾರಿಯ ಜೊತೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಸಿಸ್ಟಂ ಅನಾಲಿಸ್ಟ್** ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿ ಇರಿಸಿ & ಇ–ಆಡಳಿತ ವಿಭಾಗಕ್ಕೆ ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸಹಾಯಕ ನಿರ್ದೇಶಕರು(ಪ್ರಸಾರಾಂಗ) ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಡಾ. ಗೋವಿಂದ ಬಿ. ಇವರಿಗೆ ಉಪ ನಿರ್ದೇಶಕರನ್ನಾಗಿ ಪದೋನ್ನತಿ ನೀಡಿರುವುದರಿಂದ ಪ್ರಸ್ತುತ ಸಹಾಯಕ ನಿರ್ದೇಶಕರು(ಪ್ರಸಾರಾಂಗ) ಹುದ್ದೆ ಖಾಲಿ ಇದ್ದು, ಪ್ರಸಾರಾಂಗದಲ್ಲಿ ಹೆಚ್ಚುವರಿ ಕೆಲಸ ಕಾರ್ಯಗಳ ನಿರ್ವಹಣೆಗೆ ಅನುಕೂಲವಾಗುವಂತೆ ಡಾ. ತಿಮ್ಮಣ್ಣ ಆರ್. ಯೋಜನಾ ಸಹಾಯಕರು, ಕರ್ನಾಟಕ ಸಂಸ್ಕೃತ |

| | |
|---|---|
| | ವಿಶ್ವವಿದ್ಯಾಲಯ ಇವರಿಗೆ ಇರುವ ಹುದ್ದೆಯ ಜವಾಬ್ದಾರಿಯ ಜೊತೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಸಹಾಯಕ ನಿರ್ದೇಶಕರು**(ಪ್ರಸಾರಾಂಗ) ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿ ಇರಿಸಿ ಆದೇಶಿಸಿದೆ.<br>ಈ ಮೇಲ್ಕಂಡ ಸಿಬ್ಬಂದಿಗಳಿಗೆ ಕರ್ನಾಟಕ ನಾಗರಿಕ ಸೇವಾ ನಿಯಮ(32) ಮತ್ತು (68)ರಂತೆ ಅಧಿಕ ಪ್ರಭಾರದಲ್ಲಿರಿಸಿ ಆದೇಶಿಸಲಾಗಿದ್ದು ಘಟನೋತ್ತರ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |
| **ನಿರ್ಣಯ** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಅಧಿಕ ಪ್ರಭಾರದಲ್ಲಿರಿಸಿರುವುದಕ್ಕೆ ಸಭೆಯು ಅನುಮೋದಿಸಿತು.** |
| **ವಿಷಯ 05** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ತಾತ್ಕಾಲಿಕ/ತಾತ್ವಿಕವಾಗಿ ಸಹಾಯಕ ಕುಲಸಚಿವರನ್ನು ನೇಮಿಸುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪರೀಕ್ಷಾ ವಿಭಾಗದಲ್ಲಿ UUCMSನಲ್ಲಿ ಕಾರ್ಯನಿರ್ವಹಿಸಲು ಹಾಗೂ ಪರೀಕ್ಷಾ ವಿಭಾಗದಲ್ಲಿ ಹೆಚ್ಚುವರಿ ಕೆಲಸ ಕಾರ್ಯಗಳ ನಿರ್ವಹಣೆಗೆ ಅನುಕೂಲವಾಗುವಂತೆ **ವಿದ್ವಾನ್ ಆರ್. ಜಗನ್ನಾಥ್ ಪೂಜಾರ್,** ಯೋಜನಾ ಸಹಾಯಕರು (ಶೈಕ್ಷಣಿಕ) ಇವರಿಗೆ ಸಹಾಯಕ ಕುಲಸಚಿವರ ಹುದ್ದೆಯ ಜವಾಬ್ದಾರಿಯಲ್ಲಿ ಇರಿಸಲು ಮಾನ್ಯ ಕುಲಪತಿಗಳ ಆದೇಶದಂತೆ ತಾತ್ಕಾಲಿಕ ಮತ್ತು ತಾತ್ವಿಕವಾಗಿ ಮುಂದಿನ ಆದೇಶದವರೆಗೆ ಯಾವುದೇ ಹಣಕಾಸಿನ ಸೌಲಭ್ಯಗಳನ್ನು ನೀಡದೇ ಹೆಚ್ಚುವರಿ ಜವಾಬ್ದಾರಿಯನ್ನು ನೀಡಿ ಪರೀಕ್ಷಾ ವಿಭಾಗದಲ್ಲಿ ಕಾರ್ಯನಿರ್ವಹಿಸಲು ಆದೇಶಿಸಿದೆ. ಈ ಸಂಬಂಧ ಪ್ರಶಾಸನ ಸಮಿತಿಯ **ಘಟನೋತ್ತರ** ಅನುಮೋದನೆಗೆ ಮಂಡಿಸಿದೆ. |
| **ನಿರ್ಣಯ** | ವಿದ್ವಾನ್ ಆರ್. ಜಗನ್ನಾಥ್ **ಪೂಜಾರ್,** ಯೋಜನಾ ಸಹಾಯಕರು (ಶೈಕ್ಷಣಿಕ) ಇವರಿಗೆ **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ತಾತ್ಕಾಲಿಕ/ತಾತ್ವಿಕವಾಗಿ ಸಹಾಯಕ ಕುಲಸಚಿವರ ಹುದ್ದೆಯಲ್ಲಿರಿಸಿದ್ದಕ್ಕೆ ಸಭೆಯು ಅನುಮೋದಿಸಿತು.** |
| **ವಿಷಯ 06** | **ಶ್ರೀ ಎಚ್. ಎಂ. ಮ್ಯಾಗೇರಿ, ಸಹ ಶಿಕ್ಷಕರು, ಶ್ರೀ ಶಂಭುಲಿಂಗ ಸಂಸ್ಕೃತ ಪಾಠಶಾಲೆ, ಇಲಕಲ್, ಹುನಗುಂದ ತಾ, ಬಾಗಲಕೋಟೆ ಜಿಲ್ಲೆ-587125- ಇವರನ್ನು ಸೇವೆಯಿಂದ ವಜಾ ಮಾಡಿದ್ದು, ಇಲಾಖಾ ಅನುಮತಿ ನೀಡುವ ಬಗೆಗೆ.** |
| **ಟಿಪ್ಪಣಿ** | **ಶ್ರೀ ಶಂಭುಲಿಂಗ ಸಂಸ್ಕೃತ ಪಾಠಶಾಲೆ, ಇಲಕಲ್, ಹುನಗುಂದ ತಾ, ಬಾಗಲಕೋಟೆ** ಈ ಪಾಠಶಾಲೆಯು1978-79ನೇ ಸಾಲಿನಲ್ಲಿ ಇಲಾಖಾ ಅನುಮತಿಯಂತೆ ಪ್ರಥಮ ಮತ್ತು ಕಾವ್ಯ ತರಗತಿಗಳು ಅನುದಾನ ಸಹಿತವಾಗಿ 2023-24ನೇ ಸಾಲಿನ ವರೆಗೆ ಮಾನ್ಯತೆ ಪಡೆದು ಕ್ರೀಯಾಶೀಲವಾಗಿ ನಡೆಯುತ್ತಿದೆ. 105 ವಿದ್ಯಾರ್ಥಿಗಳು ದಾಖಲಾತಿಯಾಗಿ ಪ್ರಸಕ್ತ ಸಾಲಿನ ಪರೀಕ್ಷೆಯ ಫಲಿತಾಂಶವು ಉತ್ತಮವಾಗಿದೆ. ಇಲ್ಲಿ ಒಟ್ಟು ಮೂರು ಶಿಕ್ಷಕರ ಹುದ್ದೆಗಳು ಅನುದಾನ ಸಹಿತವಾಗಿ ಅನುಮೋದನೆಗೊಂಡು ಕಾರ್ಯ ನಿರ್ವಹಿಸುತ್ತಿವೆ. ಈ ಪೈಕಿ ಶ್ರೀ **ಎಚ್.ಎಂ. ಮ್ಯಾಗೇರಿ** ಸಹ ಶಿಕ್ಷಕರು ಸಹ ಒಬ್ಬರು, ಇವರು ದಿನಾಂಕ: 23.05.1997ರಂದು ಅನುದಾನಕ್ಕೆ ಒಳಪಟ್ಟು ಕರ್ತವ್ಯ ನಿರ್ವಹಿಸಿ ದಿನಾಂಕ: 11.02.2000ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಿದ್ದ ಪ್ರಯುಕ್ತ ಅಗತ್ಯ ಕ್ರಮಗಳನ್ನು ಜರುಗಿಸಿ, ಇಲಾಖೆಯ ಪೂರ್ವಾನುಮತಿ (ದಿ:23/11/2009ರ ಪತ್ರದಂತೆ) ಪಡೆದುಕೊಂಡು ಶಿಸ್ತು ಕ್ರಮ ಪ್ರಕರಣದ ಸತ್ಯಾಸತ್ಯತೆಯನ್ನು ಕಂಡು ಹಿಡಿಯಲು ಇಲಾಖೆಯ ಪ್ರತಿನಿಧಿಯಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇಲಾಖೆ, ಹುನಗುಂದ (ದಿ: 24/02/2011ರ ಪತ್ರದಂತೆ) ಇವರನ್ನೊಳಗೊಂಡ ತ್ರಿಸದಸ್ಯ ಸಮಿತಿ ರಚಿಸಿ **ಇಲಾಖಾ ವಿಚಾರಣೆಗಾಗಿ** ಪ್ರಕರಣವನ್ನು ಒಪ್ಪಿಸಲಾಗಿತ್ತು. ಅದರಂತೆ ವಿಚಾರಣೆಯನ್ನು ಪೂರ್ಣಗೊಳಿಸಿ ದೀರ್ಘಕಾಲದ ಅನಧಿಕೃತ ಗೈರು ಹಾಜರಿಯನ್ನು ದೃಢಪಡಿಸಿ(4 ತಿಂಗಳಿಗೂ ಹೆಚ್ಚು ಮೀರಿದ ಅ.ಗೈ.ಹಾಜರಿ) ನೀಡಿದ ವರದಿ – ಶಿಫಾರಸ್ಸಿನಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪತ್ರ ಸಂಖ್ಯೆ:ಕಸಂವಿ/ಸಂಶಿನಿ/97:ಅ.ಗೈ.ಶಿ.ಅ/2011–12/14, ದಿನಾಂಕ:05.04.2012 ರಲ್ಲಿ ಅನುಮತಿ ನೀಡಿ ತಿಳಿಸಿದಂತೆ ಶಿಸ್ತುಕ್ರಮದ ನಡಾವಳಿಕೆಯ ಎಲ್ಲಾ ಪ್ರಕ್ರಿಯೆ ಪೂರೈಸಿ, ಠರಾವು ಪಾಸ್ ಮಾಡಿ, ದಿನಾಂಕ: 14/09/2001ರ ಸರ್ಕಾರಿ ಸುತ್ತೋಲೆಯನ್ನು ಗಮನದಲ್ಲಿಟ್ಟುಕೊಂಡು (೪ ತಿಂಗಳಿಗೂ ಹೆಚ್ಚು ಅ.ಗೈ.ಹಾಜರಿ ಮೀರಿದ್ದರಿಂದ) ಅಂತಿಮವಾಗಿ ಅನುದಾನ ಸಂಹಿತೆ ನಿಯಮಾನುಸಾರ ದಿನಾಂಕ: 13.08.2012ರಿಂದ ಜಾರಿಗೆ ಬರುವಂತೆ ಸದರಿ ಶ್ರೀ ಎಚ್.ಎಮ್. ಮ್ಯಾಗೇರಿ ಇವರನ್ನು ಸಹಶಿಕ್ಷಕ ಹುದ್ದೆಯ **ಸೇವೆಯಿಂದ ತೆಗೆದುಹಾಕಿ** ಆಡಳಿತ ಮಂಡಳಿಯು ಆದೇಶಿಸಿದೆ. **ಶ್ರೀ ಎಚ್.ಎಮ್. ಮ್ಯಾಗೇರಿ** ಸ.ಶಿ. ಇವರನ್ನು **ಸೇವೆಯಿಂದ ತೆಗೆದು ಹಾಕಿರುವ** ಬಗೆಗೆ ಇಲಾಖಾ ಅನುಮೋದನೆಗೆ ದಿನಾಂಕ: 21.08.2012ರಂದೆ ಆಡಳಿತ ಮಂಡಳಿಯು ಮನವಿಯನ್ನು ಸಲ್ಲಿಸಿರುತ್ತಾರೆ. ಆದರೆ ಸದರಿ ವಿಷಯದ ಬಗೆಗೆ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದಿಂದ ಯಾವುದೇ ಪತ್ರ ವ್ಯವಹಾರ ಆಗಿರುವುದು |

| | |
|---|---|
| | ಕಂಡು ಬಂದಿರುವುದಿಲ್ಲ. ಇವರನ್ನು ಕೆಲಸದಿಂದ ವಜಾ ಮಾಡಿದ ಆದೇಶವಿಲ್ಲದೆ ಖಾಲಿ ಹುದ್ದೆಯನ್ನು ಭರ್ತಿ ಮಾಡುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಾಧ್ಯವಿಲ್ಲ. ಆದ್ದರಿಂದ ಸದರಿ ಶಿಕ್ಷಕರನ್ನು ವಜಾ ಮಾಡಿರುವ ಬಗೆಗೆ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದಿಂದ ಅನುಮೋದನೆ ನೀಡಿ ಆದೇಶವನ್ನು ನೀಡಬೇಕಾಗಿದ್ದು ಪ್ರಶಾಸನ ಸಮಿತಿ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ. |
| ನಿರ್ಣಯ | **ಶ್ರೀ ಎಚ್. ಎಂ. ಮ್ಯಾಗೇರಿ, ಸಹ ಶಿಕ್ಷಕರು, ಶ್ರೀ ಶಂಭುಲಿಂಗ ಸಂಸ್ಕೃತ ಪಾಠಶಾಲೆ, ಇಲಕಲ್, ಹುನಗುಂದ ತಾ, ಬಾಗಲಕೋಟೆ ಜಿಲ್ಲೆ – ಇವರನ್ನು ಆಡಳಿತ ಮಂಡಳಿಯು ದಿನಾಂಕ: 13.08.2012ರಿಂದ ಜಾರಿಗೆ ಬರುವಂತೆ ಸೇವೆಯಿಂದ ತೆಗೆದು ಹಾಕಿರುವುದನ್ನು ಸ್ಥಿರೀಕರಿಸಲು ಸಭೆಯು ಒಪ್ಪಿತು.** |
| **ವಿಷಯ 07** | **ಬ್ಯಾಕ್‌ಲಾಗ್ [371(ಜೆ)] ರಾಜ್ಯ ವೇತನಶ್ರೇಣಿಯ ಬೋಧಕ ಹುದ್ದೆಯನ್ನು ಭರ್ತಿ ಮಾಡುವ ಬಗೆಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ರಾಜ್ಯ ವೇತನಶ್ರೇಣಿಯ ಬೋಧಕ - ಯೋಜನಾ ಸಹಾಯಕರು (ಶೈಕ್ಷಣಿಕ) ಬ್ಯಾಕ್‌ಲಾಗ್ [371(ಜೆ)] ಹುದ್ದೆಯು ಖಾಲಿ ಇದ್ದು, ಸರ್ಕಾರಿ ಪತ್ರ ಸಂಖ್ಯೆ: ಇಡಿ 145 ಯುಎನ್‌ಇ 2022 ದಿನಾಂಕ: 19.06.2023ರಲ್ಲಿ ಭರ್ತಿ ಮಾಡಲು ಅನುಮತಿಯನ್ನು ನೀಡಿದ್ದು, ಭರ್ತಿ ಮಾಡುವ ಸಂಬಂಧ ಪ್ರಶಾಸನ ಸಮಿತಿಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ಬ್ಯಾಕ್‌ಲಾಗ್ [371(ಜೆ)] ರಾಜ್ಯ ವೇತನಶ್ರೇಣಿಯ ಬೋಧಕ ಹುದ್ದೆಯನ್ನು ಭರ್ತಿ ಮಾಡಲು ಸಭೆಯು ಅನುಮೋದಿಸಿತು.** |
| **ವಿಷಯ 08** | **ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನ ಸಂಸತ್‌ನ ಪರಿನಿಯಮ ರಚನಾ ಸಮಿತಿಯು ಸಲ್ಲಿಸಿದ ಅಂತಿಮ ಪರಿಷ್ಕರಣಾ ಪರಿನಿಯಮದ ವರದಿಯನ್ನು ಅನುಮೋದಿಸುವ ಬಗೆಗೆ.** |
| **ಟಿಪ್ಪಣಿ** | ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನ ಸಂಸತ್‌ನ್ನು ಸರ್ಕಾರದ ಆದೇಶದಂತೆ 2016ರಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆಡಳಿತ ನಿರ್ವಹಣೆ/ನಿಯಂತ್ರಣಕ್ಕೆ ಒಳಪಡಿಸಿದೆ. ಅಲ್ಲಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನದಲ್ಲಿ ಸ್ವತಂತ್ರ, ಸ್ವಾಯತ್ತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಸರ್ಕಾರಿ ಆದೇಶ ಸಂಖ್ಯೆ: **ಇಡಿ 76 ಯುಎನ್‌ಇ 2023, ದಿನಾಂಕ: 18.03.2024.** ರಲ್ಲಿ 6 ತಿಂಗಳುಗಳೊಳಗಾಗಿ ನಿಯಮಗಳು/ಕಾಯ್ದೆ ರೂಪಿಸುವಂತೆ ಸರ್ಕಾರವು ನಿರ್ದೇಶಿಸಿರುತ್ತದೆ. ಈ ಬಗ್ಗೆ ಪರಿನಿಯಮ ರಚಿಸಲು ಅಂತಿಮ ಪರಿಷ್ಕರಣಾ ಸಮಿತಿಯನ್ನು ರಚಿಸಿದ್ದು, ಸಮಿತಿಯು ದಿನಾಂಕ: 17.04.2024ರಂದು ಕರಡು ವರದಿ ಸಲ್ಲಿಸಿರುತ್ತದೆ. **5ನೇಯ ಆಡಳಿತ ಸಮಿತಿ ಸಭೆಯ ವಿಷಯ 10(ಎ) ನಿರ್ಣಯದಂತೆ.** ಪರಿನಿಯಮದ ಕರಡು ವರದಿಯನ್ನು ಆಡಳಿತ ಸಮಿತಿಗೆ ಸಲ್ಲಿಸಿದ್ದು, **5ನೇಯ ಆಡಳಿತ ಸಮಿತಿ ಸಭೆಯ ವಿಷಯ ಸಂಖ್ಯೆ 10(ಎ) ರಲ್ಲಿ** ಈ ಕೆಳಕಂಡಂತೆ ನಿರ್ಣಯ ಕೈಗೊಂಡಿರುತ್ತದೆ. "ಪರಿನಿಯಮದ ಕರಡನ್ನು ಅನುಮೋದಿಸಿತು. ಹಾಗೆಯೆ ಸದರಿ ಕರಡನ್ನು ಸಕ್ಷಮ ಪ್ರಾಧಿಕಾರವಾದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಲು ಒಪ್ಪಿತು" **ಆದ್ದರಿಂದ ಪ್ರಶಾಸನ ಸಮಿತಿಯ** ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ಸಭೆಯು ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನ ಸಂಸತ್‌ನ ಪರಿನಿಯಮ ರಚನಾ ಸಮಿತಿಯು ಸಲ್ಲಿಸಿದ ಅಂತಿಮ ಪರಿಷ್ಕರಣಾ ಪರಿನಿಯಮದ ವರದಿಯನ್ನು ಅನುಮೋದಿಸಿತು.** |
| **ವಿಷಯ 09** | **ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನ ಸಂಸತ್‌ನ ವೃಂದ ಮತ್ತು ನೇಮಕಾತಿ ನಿಯಮಾವಳಿಯ ಸಮಿತಿಯು ಸಲ್ಲಿಸಿದ ವೃಂದ ಮತ್ತು ನೇಮಕಾತಿ ನಿಯಮಾವಳಿಯ ಅಂತಿಮ ಪರಿಷ್ಕರಣಾ ವರದಿಯನ್ನು ಅನುಮೋದಿಸುವ ಬಗೆಗೆ.** |
| **ಟಿಪ್ಪಣಿ** | ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನ ಸಂಸತ್‌ನ್ನು ಸರ್ಕಾರದ ಆದೇಶದಂತೆ 2016ರಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆಡಳಿತ ನಿರ್ವಹಣೆ/ನಿಯಂತ್ರಣಕ್ಕೆ ಒಳಪಡಿಸಿದೆ. ಅಲ್ಲಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನದಲ್ಲಿ ಸ್ವತಂತ್ರ, ಸ್ವಾಯತ್ತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಸರ್ಕಾರಿ ಆದೇಶ ಸಂಖ್ಯೆ: ಇಡಿ 76 ಯುಎನ್‌ಇ 2023, ದಿನಾಂಕ: 18.03.2024. ರಲ್ಲಿ 6 ತಿಂಗಳುಗಳೊಳಗಾಗಿ ನಿಯಮಗಳು/ಕಾಯ್ದೆ ರೂಪಿಸುವಂತೆ ಸರ್ಕಾರವು ನಿರ್ದೇಶಿಸಿರುತ್ತದೆ. ಈ ಸಂಬಂಧ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು |

| | |
|---|---|
| | ರೂಪಿಸುವಂತೆ ಸರ್ಕಾರವು ನಿರ್ದೇಶಿಸಿರುತ್ತದೆ. ಈ ಸಂಬಂಧ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ಪರಿಷ್ಕರಿಸಲು ರಚಿಸಿದ್ದ ಅಂತಿಮ ಪರಿಷ್ಕರಣಾ ಸಮಿತಿಯು ದಿನಾಂಕ: 17.04.2024ರಂದು ಕರಡು ವರದಿ ಸಲ್ಲಿಸಿರುತ್ತದೆ. 5ನೇಯ ಆಡಳಿತ ಸಮಿತಿ ಸಭೆಯ ವಿಷಯ 10(ಬಿ)ಯಲ್ಲಿ ಆಡಳಿತ ಸಮಿತಿಯು ಈ ಕೆಳಕಂಡಂತೆ ನಿರ್ಣಯ ಕೈಗೊಂಡಿರುತ್ತದೆ.<br>"ವೃಂದ ಮತ್ತು ನೇಮಕಾತಿ ನಿಯಮಾವಳಿಯ ಕರಡನ್ನು ಅನುಮೋದಿಸಿತು. ಹಾಗೆಯೆ ಸದರಿ ಕರಡನ್ನು ಸಕ್ಷಮ ಪ್ರಾಧಿಕಾರವಾದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಲು ಒಪ್ಪಿತು" **ಆದ್ದರಿಂದ ಪ್ರಶಾಸನ ಸಮಿತಿಯ** ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನ ಸಂಸತ್‌ನ ವೃಂದ ಮತ್ತು ನೇಮಕಾತಿ ನಿಯಮಾವಳಿಯ ಸಮಿತಿಯು ಸಲ್ಲಿಸಿದ ವೃಂದ ಮತ್ತು ನೇಮಕಾತಿ ನಿಯಮಾವಳಿಯ ಅಂತಿಮ ಪರಿಷ್ಕರಣಾ ವರದಿಯನ್ನು ಸಭೆಯು ಅನುಮೋದಿಸಿತು.** |
| **ವಿಷಯ 10** | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ಪ್ರಾರಂಭವಾಗುವ ಪೂರ್ವದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ನೇಮಕಗೊಂಡು ಖಾಯಂಪೂರ್ವ ಸೇವಾವಧಿ ತೃಪ್ತಿಕರ ಘೋಷಣಾ ಆದೇಶಗಳನ್ನು ಪಡೆಯದೇ ಇರುವ ಶಿಕ್ಷಕರಿಗೆ ಘಟನೋತ್ತರ ಆದೇಶವನ್ನು ನೀಡಲು ಅನುಮೋದಿಸುವ ಬಗ್ಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ಪ್ರಾರಂಭಗೊಳ್ಳುವ ಮೊದಲು ಸಂಸ್ಕೃತ ಪಾಠಶಾಲೆಗಳ ಶಿಕ್ಷಕರ ಹುದ್ದೆಗಳ ನೇಮಕಾತಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಅನುಮೋದನೆಯನ್ನು ಪಡೆದುಕೊಳ್ಳಲಾಗುತ್ತಿತ್ತು. ಆ ನಂತರದಲ್ಲಿ ಪಾಠಶಾಲೆಗಳ ಆಡಳಿತಾತ್ಮಕ ಅಧಿಕಾರವನ್ನು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯಕ್ಕೆ ವರ್ಗಾಯಿಸಲಾಗಿದ್ದು, ಈ ಹಿಂದೆ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ನೇಮಕಗೊಂಡ ಕೆಲವು ಶಿಕ್ಷಕರು ಖಾಯಂ ಪೂರ್ವ ಸೇವಾವಧಿ ತೃಪ್ತಿಕರ ಆದೇಶಗಳನ್ನು ಪಡೆಯದೇ ಇರುವುದು ಕಂಡುಬಂದಿರುತ್ತದೆ. ಅಂತಹ ಶಿಕ್ಷಕರಿಗೆ ಘಟನೋತ್ತರವಾಗಿ ಖಾಯಂ ಪೂರ್ವ ಸೇವಾವಧಿ ಆದೇಶವನ್ನು ನೀಡಲು ಪ್ರಶಾಸನ ಸಮಿತಿ ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ಎಷ್ಟು ಶಿಕ್ಷಕರಿಗೆ ಖಾಯಂಪೂರ್ವ ಸೇವಾವಧಿ ತೃಪ್ತಿಕರ ಘೋಷಣಾ ಆದೇಶಗಳನ್ನು ನೀಡಿಲ್ಲವೋ ಅಂತಹ ಶಿಕ್ಷಕರ ಪ್ರಕರಣವಾರು ಪ್ರತ್ಯೇಕವಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಸರ್ಕಾರದ ಅನುಮೋದನೆ ಪಡೆದು ಕ್ರಮವಹಿಸಲು ತೀರ್ಮಾನಿಸಲಾಯಿತು.** |
| **ವಿಷಯ 11** | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಕಾನೂನು ಸಲಹೆಗಾರರಾದ ಶ್ರೀ ವೆಂಕಟೇಶ್, ವಕೀಲರು –ಇವರ ಮಾಸಿಕ ಕಾನೂನು ಶುಲ್ಕವನ್ನು ಪಾವತಿಸುವ ಬಗ್ಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯಕ್ಕೆ ಸಂಬಂಧಿಸಿದ ನ್ಯಾಯಾಲಯ ಪ್ರಕರಣಗಳಿಗೆ ಕಾನೂನು ಸಲಹೆಗಾರರಾಗಿ ನೇಮಕಗೊಂಡು ಕೆಲಸ ನಿರ್ವಹಿಸುತ್ತಿರುವ ವಕೀಲರಾದ ಶ್ರೀ ವೆಂಕಟೇಶ್‌ರವರಿಗೆ ಮಾಸಿಕ ರೂ. 15000/- ರಂತೆ ಸಂಭಾವನೆಯನ್ನು ನಿಗಧಿಪಡಿಸಲಾಗಿತ್ತು. ದಿನಾಂಕ:16.08.2022 ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿ ವಿಷಯ ಸಂಖ್ಯೆ–08 ರಂತೆ ಮತ್ತು ದಿನಾಂಕ:18.02.2022 ರಂದು ನಡೆದ 61ನೇ ಪ್ರಶಾಸನ ಸಮಿತಿ ಸಭೆಯ ನಡಾವಳಿ ವಿಷಯ ಸಂಖ್ಯೆ–14 ರಂತೆ ಪ್ರಕರಣವಾರು ಶುಲ್ಕ ಪಾವತಿಸಲು ಸೂಚಿಸಿ ಸಂಭಾವನೆಯನ್ನು ಪಾವತಿಸಲು ಅನುಮೋದನೆ ನೀಡಲಾಗಿದೆ. ಆದರೆ ಶ್ರೀ ವೆಂಕಟೇಶ್, ವಕೀಲರು ಇವರು ಈ ಹಿಂದಿನಂತೆ ಮಾಸಿಕ 15000/- ರೂ. ಸಂಭಾವನೆ ನೀಡುವಂತೆ ಕೋರಿರುತ್ತಾರೆ. ಆದ್ದರಿಂದ ಸದರಿಯವರಿಗೆ ಸಂಭಾವನೆ ಪಾವತಿಸಲು ಹಾಗೂ ಸದರಿಯವರ ಸೇವೆಯನ್ನು ಮುಂದುವರಿಸುವ ಬಗ್ಗೆ ಪ್ರಶಾಸನ ಸಮಿತಿ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ. |

| | |
|---|---|
| **ನಿರ್ಣಯ** | **ಶ್ರೀ ವೆಂಕಟೇಶ್ ಅವರೊಂದಿಗೆ ಚರ್ಚಿಸಿ 61ನೇ ಪ್ರಶಾಸನ ಸಮಿತಿ ಸಭೆಯ ನಡಾವಳಿಯಂತೆ ಪ್ರಕರಣವಾರು ಶುಲ್ಕ ಪಾವತಿಸುವುದು ಮತ್ತು ಅಗತ್ಯವಿಲ್ಲದಿದ್ದಲ್ಲಿ ಸದರಿಯವರ ಸೇವೆಯನ್ನು ಮೊಟಕುಗೊಳಿಸಲು ತೀರ್ಮಾನಿಸಲಾಯಿತು.** |
| **ವಿಷಯ 12** | **ಪ್ರಸಾರಾಂಗದ ವತಿಯಿಂದ ಪುಸ್ತಕಗಳನ್ನು ಮುದ್ರಿಸುವ ಬಗ್ಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನ ಸಂಸ್ಥೆಯಾದ ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನ ಸಂಸತ್ ಸಂಸ್ಥೆಯು ಲಾರ್ಡ್ ನರಸಿಂಹ ಶೀರ್ಷಿಕೆಯ ಪುಸ್ತಕದ ಹಕ್ಕುಸ್ವಾಮ್ಯವನ್ನು ಹೊಂದಿದ್ದು, ಈ ಪುಸ್ತಕವನ್ನು ವಿಶ್ವವಿದ್ಯಾಲಯದ ಪ್ರಸಾರಾಂಗದ ವತಿಯಿಂದ ಮುದ್ರಿಸಿ, ಒಟ್ಟು ಪುಸ್ತಕದಲ್ಲಿ ಶೇ. 50:50 ಅನುಪಾತದಲ್ಲಿ ನೀಡುವ ಬಗೆಗೆ ಪ್ರಶಾಸನ ಸಮಿತಿ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನ ಸಂಸ್ಥೆಯಾದ ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನ ಸಂಸತ್ ಸಂಸ್ಥೆಯು Science and Technology in Ancient India ಶೀರ್ಷಿಕೆಯ ಪುಸ್ತಕದ ಹಕ್ಕುಸ್ವಾಮ್ಯವನ್ನು ಹೊಂದಿದ್ದು, ಈ ಪುಸ್ತಕವನ್ನು ವಿಶ್ವವಿದ್ಯಾಲಯದ ಪ್ರಸಾರಾಂಗದ ವತಿಯಿಂದ ಮುದ್ರಿಸಿ, ಒಟ್ಟು ಪುಸ್ತಕದಲ್ಲಿ ಶೇ. 50:50 ಅನುಪಾತದಲ್ಲಿ ನೀಡುವ ಬಗೆಗೆ ಪ್ರಶಾಸನ ಸಮಿತಿ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ. |
| **ನಿರ್ಣಯ** | **ಲಾರ್ಡ್ ನರಸಿಂಹ ಮತ್ತು Science and Technology in Ancient India ಪ್ರಸಾರಾಂಗದಿಂದ ಮುದ್ರಿಸಿ 60:40 ಅನುಪಾತದಲ್ಲಿ ನೀಡಲು ಸಭೆಯು ಅನುಮೋದಿಸಿತು.** |
| **ವಿಷಯ 13** | **ಪ್ರಸಾರಾಂಗದಲ್ಲಿ ಮಾರಾಟವಾಗದೆ ಉಳಿದಿರುವ ಹಳೆಯ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ/ಸಂಶೋಧನಾ ಕೇಂದ್ರಗಳಿಗೆ ಉಚಿತವಾಗಿ ನೀಡುವ ಬಗೆಗೆ.** |
| **ಟಿಪ್ಪಣಿ** | ಪ್ರಸಾರಾಂಗದಿಂದ ಮುದ್ರಿತವಾದ ಕೆಲವು ಪುಸ್ತಕಗಳು ದಾಸ್ತಾನು ಉಳಿದಿದ್ದು, ವಿವರ ಈ ಕೆಳಗಿನಂತಿದೆ.<br>1) ಸಾಂಖ್ಯ ಪ್ರವಚನ ಭಾಷ್ಯ – 420 ಪುಸ್ತಕಗಳು<br>2) ವ್ಯಾಕಪದೀಯ – 265 ಪುಸ್ತಕಗಳು<br>3) ಋಷಿಕವಿ ಕನಕದಾಸ – 200 ಪುಸ್ತಕಗಳು<br>ಈ ಪುಸ್ತಕಗಳು ಹಳೆಯದಾಗಿದ್ದು ನಾಶವಾಗುವ ಸಂಭವವಿರುವುದರಿಂದ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ವಿದ್ಯಾರ್ಥಿಗಳಿಗೆ/ಸಂಶೋಧನಾ ಕೇಂದ್ರಗಳಿಗೆ ಉಚಿತವಾಗಿ ನೀಡಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| **ನಿರ್ಣಯ** | **ಪ್ರಸಾರಾಂಗದಲ್ಲಿ ಮಾರಾಟವಾಗದೆ ಉಳಿದಿರುವ ಹಳೆಯ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ/ಸಂಶೋಧನಾ ಕೇಂದ್ರಗಳಿಗೆ ಉಚಿತವಾಗಿ ನೀಡಲು ಸಭೆಯು ಅನುಮೋದಿಸಿತು.** |
| **ವಿಷಯ 14** | ಸಹಾಯಕ ಪ್ರಾಧ್ಯಾಪಕರಿಗೆ **CAS** ಪದೋನ್ನತಿ ನೀಡುವ ಬಗ್ಗೆ. |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಇಬ್ಬರು ಸಹಾಯಕ ಪ್ರಾಧ್ಯಾಪಕರಾದ **ಡಾ. ಋಷಿದೇವ್ ಭಾರ್ಗವ್ ಎನ್.** ಮತ್ತು **ಡಾ. ಕೃಷ್ಣ ವಿ. ಜೋಶಿ** ಇವರು Academic Level 11 ರಿಂದ Academic Level 12 ನೆಯ CAS ಪದೋನ್ನತಿಗೆ ನೀಡುವ ಬಗ್ಗೆ ರಚಿಸಲಾದ Screening and Evaluation ಸಮಿತಿಯು ದಿ: 26.06.2024ರಂದು ಸಭೆ ಸೇರಿ ಅರ್ಹತಾ ದಿನಾಂಕದಿಂದ CAS ಪದೋನ್ನತಿ ನೀಡುವಂತೆ ಶಿಫಾರಸ್ಸು ಮಾಡಿದ್ದು, ಈ ಎರಡು ಸಹಾಯಕ ಪ್ರಾಧ್ಯಾಪಕರಿಗೆ CAS ಪದೋನ್ನತಿ ನೀಡುವ ಬಗ್ಗೆ ಪ್ರಶಾಸನ ಸಮಿತಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| **ನಿರ್ಣಯ** | **ಡಾ. ಋಷಿದೇವ್ ಭಾರ್ಗವ್ ಎನ್. ಮತ್ತು ಡಾ. ಕೃಷ್ಣ ವಿ. ಜೋಶಿ ಇವರಿಗೆ Academic Level 11 ರಿಂದ** |

| | |
|---|---|
| | **Academic Level 12 ನೆಯ CAS ಪದೋನ್ನತಿ ನೀಡಲು ಸಭೆಯು ಅನುಮೋದಿಸಿತು.** |
| **ವಿಷಯ 15** | **ಸಹಾಯಕ ಗ್ರಂಥಪಾಲಕರಿಗೆ CAS ಪದೋನ್ನತಿ ನೀಡುವ ಬಗ್ಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಇಬ್ಬರು ಸಹಾಯಕ ಗ್ರಂಥಪಾಲಕರಾದ **ಶ್ರೀ ಅರುಣ್‌ಕುಮಾರ್ ಹೆಚ್.ಎಸ್. ಮತ್ತು ಶ್ರೀ ರಮೇಶ ಎಸ್ ಪುಟ್ಟಣ್ಣನವರ್** ಇವರು Academic Level 10 ರಿಂದ Academic Level 11 ನೆಯ CAS ಪದೋನ್ನತಿಗೆ ನೀಡುವ ಬಗ್ಗೆ ರಚಿಸಲಾದ Screening and Evaluation ಸಮಿತಿಯು ದಿ: 09.08.2024ರಂದು ಸಭೆ ಸೇರಿ ಅರ್ಹತಾ ದಿನಾಂಕದಿಂದ CAS ಪದೋನ್ನತಿ ನೀಡುವಂತೆ ಶಿಫಾರಸ್ಸು ಮಾಡಿದ್ದು, ಈ ಇಬ್ಬರು ಸಹಾಯಕ ಗ್ರಂಥಪಾಲಕರಿಗೆ CAS ಪದೋನ್ನತಿ ನೀಡುವ ಬಗ್ಗೆ ಪ್ರಶಾಸನ ಸಮಿತಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| **ನಿರ್ಣಯ** | **ಶ್ರೀ ಅರುಣ್‌ಕುಮಾರ್ ಹೆಚ್.ಎಸ್. ಮತ್ತು ಶ್ರೀ ರಮೇಶ ಎಸ್ ಪುಟ್ಟಣ್ಣನವರ್ ಇವರಿಗೆ Academic Level 10 ರಿಂದ Academic Level 11 ನೆಯ CAS ಪದೋನ್ನತಿ ನೀಡಲು ಸಭೆಯು ಅನುಮೋದಿಸಿತು.** |
| **ವಿಷಯ 16** | **ವಿಶ್ವವಿದ್ಯಾಲಯದ ಕೇಂದ್ರ ಗ್ರಂಥಾಲಯಕ್ಕೆ ಅವಶ್ಯಕತೆಯಿರುವ ಪುಸ್ತಕಗಳನ್ನು ಖರೀದಿಸುವ ಬಗ್ಗೆ.** |
| **ಟಿಪ್ಪಣಿ** | ಸಂಸ್ಕೃತ ಪುಸ್ತಕಗಳ ಪ್ರಕಾಶಕರು ವಿರಳವಾಗಿದ್ದು, ಹೆಚ್ಚಿನ ಪುಸ್ತಕಗಳಿಗೆ ಒಂದೇ ಪ್ರಕಾಶಕರಿರುತ್ತಾರೆ. ಆದ್ದರಿಂದ ವಿಶ್ವವಿದ್ಯಾಲಯದ ಕೇಂದ್ರ ಗ್ರಂಥಾಲಯಕ್ಕೆ ಅವಶ್ಯಕತೆಯಿರುವ ಪುಸ್ತಕಗಳನ್ನು ಖರೀದಿಸಲು ಕೆ.ಟಿ.ಪಿ.ಪಿ. ಅಧಿನಿಯಮ 1999ರ 4ಬಿ ಪ್ರಕಾರ ಸಮಿತಿಯನ್ನು ರಚಿಸಲಾಗಿತ್ತು. ದಿ: 19.06.2024ರಂದು ಸದರಿ ಸಮಿತಿಯ ಸಭೆಯಲ್ಲಿ ಏಕ ಪ್ರಕಾಶನದ ಪುಸ್ತಕಗಳನ್ನು ಒಂದೇ ದರಪಟ್ಟಿಯ ಮೂಲಕ ಅಗತ್ಯವಿರುವ ಪುಸ್ತಕಗಳನ್ನು ಖರೀದಿಸಲು ನಿರ್ಣಯಿಸಲಾಗಿದೆ. ಸದರಿ ಸಭೆಯ ನಡವಳಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| **ನಿರ್ಣಯ** | ಗ್ರಂಥಾಲಯ ಇಲಾಖೆಯಲ್ಲಿ ಇಂತಹ ಪ್ರಸಂಗದಲ್ಲಿ ಯಾವ ಮಾನದಂಡವನ್ನು ಅನುಸರಿಸುತ್ತಾರೆ ಎಂಬುದನ್ನು ಪರಿಶೀಲಿಸಿ ಅದರಂತೆ ಕ್ರಮವಹಿಸಲು ತೀರ್ಮಾನಿಸಲಾಯಿತು. |
| **ವಿಷಯ 17** | **ಗ್ರಂಥಾಲಯದ ಪುಸ್ತಕಗಳನ್ನು "ಸಂಸ್ಕೃತ ಭಾರತಿ" (ಅಕ್ಷರಂ)ರವರಿಂದ ಉಚಿತವಾಗಿ ಸ್ಕ್ಯಾನ್ ಮಾಡಲು ಅನುಮತಿ ನೀಡುವ ಕುರಿತು.** |
| **ಟಿಪ್ಪಣಿ** | ವಿಶ್ವವಿದ್ಯಾಲಯದ ಕೇಂದ್ರ ಗ್ರಂಥಾಲಯದಲ್ಲಿ ಇರುವ ಶ್ರೀ ಚಾಮರಾಜೇಂದ್ರ ಸರ್ಕಾರಿ ಸಂಸ್ಕೃತ ಕಾಲೇಜಿನ ಪುಸ್ತಕಗಳನ್ನು "ಸಂಸ್ಕೃತ ಭಾರತಿ"(ಅಕ್ಷರಂ)ರವರು ಉಚಿತವಾಗಿ ಸ್ಕ್ಯಾನ್ ಮಾಡಲು ಅನುಮತಿ ಕೋರಿ ಪತ್ರವನ್ನು ಸಲ್ಲಿಸಿರುತ್ತಾರೆ. ಈ ಸಂಸ್ಕೃತ ಪುಸ್ತಕಗಳು ಅತ್ಯಂತ ಪ್ರಾಚೀನ ಮತ್ತು ಮೌಲ್ಯಯುತವಾಗಿದ್ದು, ಕೆಲವು ಮರುಮುದ್ರಣವನ್ನೂ ಕಂಡಿಲ್ಲ. ಆದ್ದರಿಂದ ಇಂತಹ ಪುಸ್ತಕಗಳನ್ನು ಸ್ಕ್ಯಾನ್ ಮಾಡಿದರೆ ಡಿಜಿಟಲ್ ರೂಪದಲ್ಲಿ ಸಂರಕ್ಷಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಸದರಿ ಸಂಸ್ಥೆಯ ಕೋರಿಕೆಯನ್ನು ಪ್ರಶಾಸನ ಸಮಿತಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| **ನಿರ್ಣಯ** | **ಗ್ರಂಥಾಲಯದ ಪುಸ್ತಕಗಳನ್ನು "ಸಂಸ್ಕೃತ ಭಾರತಿ" (ಅಕ್ಷರಂ)ರವರಿಂದ ಉಚಿತವಾಗಿ ಸ್ಕ್ಯಾನ್ ಮಾಡಲು ಸಭೆಯು ಅನುಮೋದಿಸಿತು.** |
| **ವಿಷಯ 18** | **ಎನ್.ಎಸ್.ಎಸ್. ಘಟಕದ ವಿದ್ಯಾರ್ಥಿಗಳಿಗೆ ನಾಯಕತ್ವ ಶಿಬಿರ ಹಾಗೂ ಎನ್.ಎಸ್.ಎಸ್. ದತ್ತಿನಿಧಿಯಿಂದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಕಾರ್ಯಕ್ರಮ ನಡೆಸುವ ಬಗ್ಗೆ.** |

| | |
|---|---|
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಎನ್.ಎಸ್.ಎಸ್. ಘಟಕದ ಸಹಯೋಗದಲ್ಲಿ ವಿದ್ಯಾರ್ಥಿಗಳಿಗೆ ಎನ್‌ಎಸ್‌ಎಸ್ ನಾಯಕತ್ವ ಶಿಬಿರವನ್ನು ಮಾಡಲು ಹಾಗೂ ಎನ್‌ಎಸ್‌ಎಸ್ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದ ವತಿಯಿಂದ ಒಂದು ಲಕ್ಷ ರೂ. ಗಳ ದತ್ತಿನಿಧಿಯನ್ನು ಇಡಲಾಗಿದ್ದು, ಇದರಿಂದ ಬರುವ ಬಡ್ಡಿ ಮೊತ್ತದಲ್ಲಿ ಎನ್‌ಎಸ್‌ಎಸ್ ಸೇವಕರಾಗಿ ಉತ್ತಮವಾಗಿ ಕಾರ್ಯನಿರ್ವಹಿಸಿದ ವಿದ್ಯಾರ್ಥಿಗಳಿಗೆ, ಎನ್‌ಎಸ್‌ಎಸ್ ಕಾರ್ಯಕ್ರಮದ ಅಧಿಕಾರಿಗಳನ್ನು ಪ್ರೋತ್ಸಾಹಿಸುವುದಕ್ಕಾಗಿ ಕಾರ್ಯಕ್ರಮವನ್ನು ಪ್ರತಿ ವರ್ಷವೂ ಮಾಡಬೇಕಾಗಿರುತ್ತದೆ. ಆದರೆ ಕೋವಿಡ್-19 ರ ಕಾರಣದಿಂದ ಈ ಕಾರ್ಯಕ್ರಮವನ್ನು ಮಾಡಲು ಸಾಧ್ಯವಾಗದ ಕಾರಣ 2020-21ನೇ ಸಾಲಿನಿಂದ 2023-24ನೇ ಸಾಲಿನವರೆಗಿನ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ನೀಡುವುದು ಹಾಗೂ ಉತ್ತಮವಾಗಿ ಕಾರ್ಯನಿರ್ವಹಿಸಿದ ವಿದ್ಯಾರ್ಥಿಗಳಿಗೆ, ಕಾಲೇಜಿನ ಎನ್‌ಎಸ್‌ಎಸ್ ಘಟಕಗಳಿಗೆ, ಹಾಗೂ ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿಗಳನ್ನು ಗೌರವಿಸಲು ಸದರಿ ದತ್ತಿನಿಧಿಯ ಬಡ್ಡಿ ಮೊತ್ತದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲು ಪ್ರಶಾಸನ ಸಮಿತಿಯ ಅನುಮೋದನೆ ಮಂಡಿಸಿದೆ. |
| ನಿರ್ಣಯ | **ಎನ್.ಎಸ್.ಎಸ್. ಘಟಕದ ವಿದ್ಯಾರ್ಥಿಗಳಿಗೆ ನಾಯಕತ್ವ ಶಿಬಿರ ಹಾಗೂ ಎನ್.ಎಸ್.ಎಸ್. ದತ್ತಿನಿಧಿಯಿಂದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಕಾರ್ಯಕ್ರಮ ನಡೆಸಲು ಸಭೆಯು ಅನುಮೋದಿಸಿತು.** |
| ವಿಷಯ 19 | **ಕಾಲೇಜುಗಳಿಗೆ ಸಂಯೋಜನೆಯನ್ನು ನೀಡುವ ಬಗ್ಗೆ.** |
| ಟಿಪ್ಪಣಿ | ಸರ್ಕಾರದ ಆದೇಶದಂತೆ ಎಲ್ಲಾ ಸಂಯೋಜನೆಯ ಪ್ರಸ್ತಾವನೆಗಳನ್ನು UUCMS ಪೋರ್ಟಲ್ ಮೂಲಕ ಆನ್‌ಲೈನ್ ನಲ್ಲಿಯೇ ಸರ್ಕಾರಕ್ಕೆ ಸಲ್ಲಿಸಬೇಕು. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು 2024-25ನೇ ಸಾಲಿಗೆ ಸಂಸ್ಕೃತ ಕಾಲೇಜುಗಳ ಸಂಯೋಜನೆ/ಹೊಸದಾಗಿ ಮಾನ್ಯತೆ/ಹೊಸಕಾಲೇಜುಗಳಿಗೆ ಅನುಮತಿ/ಸಂಯೋಜನೆಗಾಗಿ ಸ್ಥಳೀಯ ಪರಿಶೀಲನಾ ಸಮಿತಿಯನ್ನು ರಚಿಸಿತ್ತು. ಸ್ಥಳೀಯ ಪರಿಶೀಲನಾ ಸಮಿತಿಯು ಆಯಾ ಕಾಲೇಜುಗಳಿಗೆ ಭೇಟಿ ನೀಡಿ UUCMS ಪೋರ್ಟಲ್ ನಲ್ಲಿ ವರದಿ ಸಲ್ಲಿಸಿದ್ದು, ವಿವರ ಈ ಕೆಳಕಂಡಂತಿದೆ.<br>**ಸಂಯೋಜನೆ ನವೀಕರಣಗೊಂಡ ಒಟ್ಟು ಕಾಲೇಜುಗಳು: 29.** |

| ಕ್ರ.ಸಂ. | ಕಾಲೇಜಿನ ಹೆಸರು |
|---|---|
| 1 | ಶ್ರೀ ಮನ್ಮಹಾರಾಜಾ ಸಂಸ್ಕೃತ ಕಾಲೇಜು, ನ್ಯೂ ಸಯ್ಯಾಜಿರಾವ್ ರೋಡ್, ಮೈಸೂರು-24 |
| 2 | ಶ್ರೀ ಸರ್ಕಾರಿ ಸಂಸ್ಕೃತ ಕಾಲೇಜು ಮೇಲುಕೋಟೆ,571431 |
| 3 | ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು ಮಂಡ್ಯ 571811 |
| 4 | ಶ್ರೀ ಮಲೆಮಹದೇಶ್ವರ ಸಂಸ್ಕೃತ ಕಾಲೇಜು, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ |
| 5 | ಶ್ರೀ ಶಂಕರ ವಿಲಾಸ ಸಂಸ್ಕೃತ ಕಾಲೇಜು, ಶ್ರೀ ಅರಮನೆ ಜಪದಕಟ್ಟೆಮಠ, ಶಂಕರಮಠದ ರಸ್ತೆ, 2ನೇ ಅಡ್ಡರಸ್ತೆ, ಖಿಲ್ಲೆಮೊಹಲ್ಲಾ, ಮೈಸೂರು-57000 |
| 6 | ಜೆ. ಎಸ್. ಎಸ್. ಸಂಸ್ಕೃತ ಕಾಲೇಜು,<br>ಸುತ್ತೂರು -571 129, ನಂಜನಗೂಡು ತಾ॥, ಮೈಸೂರು ಜಿ॥ |
| 7 | ಶ್ರೀಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಕಾಲೇಜು, ಉಡುಪಿ – 576 10 |
| 8 | ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು, ಗೋಕರ್ಣ, ಕುಮಟ ತಾಲ್ಲೂಕು, ಉತ್ತರಕನ್ನಡ ಜಿಲ್ಲೆ. |
| 9 | ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು. ಉಮ್ಮಚಗಿ, ಯಲ್ಲಾಪುರ ತಾಲೂಕು, ಉತ್ತರ ಕನ್ನಡ ಜಿಲ್ಲೆ – 581 347 |
| 10 | ಶ್ರೀ ರಾಜರಾಜೇಶ್ವರೀ ಸಂಸ್ಕೃತ ಕಾಲೇಜು, ಸೋಂದಾ ಸ್ವರ್ಣವಲ್ಲೀ ಮಠ, ಮಠದೇವಳ ಅಂಚೆ – 581336 ಶಿರಸಿ ತಾಲ್ಲೂಕು, ಉ.ಕ. ಜಿಲ್ಲೆ |

| | | |
|---|---|---|
| | 11 | ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು, ಸುಬ್ರಹ್ಮಣ್ಯ ಸುರಕಟ್ಟೆ, ಹೊನ್ನಾವರ – 581 334, ಉ.ಕ. ಜಿಲ್ಲೆ |
| | 12 | ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಪಂಪಮಹಾಕವಿ ರಸ್ತೆ ಚಾಮರಾಜಪೇಟೆ, ಬೆಂಗಳೂರು-560018 |
| | 13 | ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಪೂರ್ಣಪ್ರಜ್ಞ ನಗರ, ಕತ್ತರಿಗುಪ್ಪೆ, ಮುಖ್ಯರಸ್ತೆ, ಬೆಂಗಳೂರು–560 028 |
| | 14 | ಶ್ರೀ ನಿರ್ವಾಣಸ್ವಾಮಿ ಸಂಸ್ಕೃತ ಕಾಲೇಜು, ಶ್ರೀದೇಗುಲಮಠ, ಕನಕಪುರ–562117 ರಾಮನಗರ ಜಿಲ್ಲೆ. |
| | 15 | ಶ್ರೀ ರುದ್ರೇಶ್ವರ ಸಂಸ್ಕೃತ ಕಾಲೇಜು, ರಾಜಘಟ್ಟ ಗ್ರಾಮ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾ॥, ಬೆಂಗಳೂರು ಗ್ರಾಮಾಂತರ ಜಿಲ್ಲೆ – 561203 |
| | 16 | ಶ್ರೀ ಬಸವೇಶ್ವರ ಸಂಸ್ಕೃತ ಕಾಲೇಜು, ಪವಾಡ ಶ್ರೀ ಬಸವಣ್ಣ ದೇವರಮಠ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ – |
| | 17 | ಶ್ರೀ ವೇದವಿಜ್ಞಾನ ಶೋಧ ಸಂಸ್ಥಾನ (ರಿ) ಸಂಸ್ಕೃತ ಕಾಲೇಜು ಚನ್ನೇನಹಳ್ಳಿ, ಮಾಗಡಿ ರಸ್ತೆ, ಬೆಂಗಳೂರು–562130 |
| | 18 | ಪೂರ್ಣಪ್ರಜ್ಞ ವಿದ್ಯಾಪೀಠ ವೇದಾಂತ ಗುರುಕುಲಂ ಸಂಸ್ಕೃತ ಕಾಲೇಜು, ಕತ್ತರಿಗುಪ್ಪೆ ಮುಖ್ಯರಸ್ತೆ, ಬೆಂಗಳೂರು–560 028 |
| | 19 | ವೇದವಿಜ್ಞಾನ ಮಹಾವಿದ್ಯಾಪೀಠ ವೇದ ಆಗಮ ಸಂಸ್ಕೃತ ಮಹಾ ಪಾಠಶಾಲೆ, ವೇದ ವಿಭಾಗ, ಕನಕಪುರ ರಸ್ತೆ, ಉದಯಪುರ, ಬೆಂಗಳೂರು,560082 |
| | 20 | ಶ್ರೀ ಸಿದ್ಧಲಿಂಗೇಶ್ವರ ವೇದ ಸಂಸ್ಕೃತ ಕಾಲೇಜು, ಸಿದ್ಧಗಂಗಾ ಮಠ, ತುಮಕೂರು –572 104 |
| | 21 | ಶ್ರೀ ಫಿರಂಗಿಸ್ವಾಮಿ ಸಂಸ್ಕೃತ ಕಾಲೇಜು, ಅಂಕನಹಳ್ಳಿ ಮಠ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ |
| | 22 | ಶ್ರೀ ಜಗದ್ಗುರು ಗುರುಬಸವೇಶ್ವರ ಸಂಸ್ಕೃತ ಕಾಲೇಜು, ಶ್ರೀ ಬೆಕ್ಕಿನಕಲ್ಮಠ, ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ವೃತ್ತ, ಶಿವಮೊಗ್ಗ–577202 |
| | 23 | ಶ್ರೀ ಪೂರ್ಣ ಪ್ರಜ್ಞಾ ಸಂಸ್ಕೃತ ಕಾಲೇಜು. ರಾಜೇಂದ್ರ ನಗರ, ಚಿತ್ರದುರ್ಗ |
| | 24 | ಶ್ರೀ ಚನ್ನಮಲ್ಲಿಕಾರ್ಜುನಸ್ವಾಮಿ ಸಂಸ್ಕೃತ ಕಾಲೇಜು, ಹಿರೇಕಲ್ಮಠ, ಹೊನ್ನಾಳಿ, ದಾವಣಗೆರೆ ಜಿಲ್ಲೆ – 577217 |
| | 25 | ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಕಾಲೇಜು, ಜಮಖಂಡಿ – 587 301 ಬಾಗಲಕೋಟೆ ಜಿಲ್ಲೆ |
| | 26 | ಶ್ರೀ ಗಜಾನನ ಸಂಸ್ಕೃತ ಕಾಲೇಜು, ಸೂಡಿ, ರೋಣ ತಾಲ್ಲೂಕು, ಗದಗ ಜಿಲ್ಲೆ |
| | 27 | ಸಿ. ಎಲ್. ವೈ. ಸಂಸ್ಕೃತ ಕಾಲೇಜು, ಕುಮಾರೇಶ್ವರ ನಗರ, ಬೆಳಗಾವಿ ರಸ್ತೆ, ಧಾರವಾಡ – 580 008. |
| | 28 | ಶ್ರೀ ಗುರುಸಾರ್ವಭೌಮ ವೇದ ಸಂಸ್ಕೃತ ಕಾಲೇಜು, ಎನ್. ಎಸ್.ಆರ್. ಎಸ್. ಮಠ, ಜವಾಹರ ನಗರ, ರಾಯಚೂರು |
| | 29 | ಶ್ರೀಮದ್ ಆದಿಜಗದ್ಗುರು ಶ್ರೀ ಸಿದ್ಧಲಿಂಗೇಶ್ವರ ಮಹಾಸ್ವಾಮಿಗಳ ಸಂಸ್ಕೃತ ಮತ್ತು ವೇದ ಮಹಾವಿದ್ಯಾಲಯ, ಮಧುರಖಂಡಿ, ಕಮರೀಮಠ, ನಂಧೀಶ್ವರ, ಅಥಣಿ, ಬೆಳಗಾವಿ ಜಿಲ್ಲೆ, |
| **ನಿರ್ಣಯ** | | **ಕಾಲೇಜುಗಳಿಗೆ ಸಂಯೋಜನೆಯನ್ನು ನೀಡಲು ಸಭೆಯು ಅನುಮೋದಿಸಿತು.** |
| **ವಿಷಯ 20** | | **ಸಿದ್ಧರಾಜು. ಎಂ, ವಿಶ್ವನಾಥ ಕೆ. ಹಾಗೂ ಪರಶಿವ ಪಿ. ಇವರ ಅಮಾನತ್ತನ್ನು ತೆರವುಗೊಳಿಸಿ ಕರ್ತವ್ಯಕ್ಕೆ ಹಾಜರುಪಡಿಸಿಕೊಂಡು ನಿಯಮಾನುಸಾರ ಜೀವನ ನಿರ್ವಹಣಾ ಭತ್ಯೆಯನ್ನು ಮಂಜೂರು ಮಾಡುವ ಬಗ್ಗೆ.** |
| **ಟಿಪ್ಪಣಿ** | | 1). ವಿಶ್ವನಾಥ್.ಕೆ ಬಿನ್ ಲೇಟ್ ಕೃಷ್ಣಭಟ್ ಕೆ., ಮುಖ್ಯಶಿಕ್ಷಕರು, ಶ್ರೀ ವಿಶ್ವಚೇತನ ಸಂಸ್ಕೃತ ಪಾಠಶಾಲೆ, ಎನ್.ಆರ್. ಮೊಹಲ್ಲಾ, ಮೈಸೂರು. 2). ಪರಶಿವ ಪಿ ಬಿನ್ ಪುಟ್ಟಸ್ವಾಮಿ, ಸಹಶಿಕ್ಷಕರು, ಶ್ರೀ ವಿಶ್ವಚೇತನ ಸಂಸ್ಕೃತ ಪಾಠಶಾಲೆ, ಎನ್.ಆರ್. ಮೊಹಲ್ಲಾ, 3). ಸಿದ್ದರಾಜು ಎಂ ಬಿನ್ ಮಹದೇವಪ್ಪ, ಮುಖ್ಯಶಿಕ್ಷಕರು, ಮಡಿವಾಳಸ್ವಾಮಿ ಸಂಸ್ಕೃತ |

| | |
|---|---|
| | ಪಾಠಶಾಲೆ, ರಾಮಾನುಜ ರಸ್ತೆ, ಮೈಸೂರು – ಇವರು ಕ್ರಿಮಿನಲ್ ಪ್ರಕರಣವೊಂದರಲ್ಲಿ ದಸ್ತಗಿರಿ ಆಗಿದ್ದರಿಂದ ಇವರನ್ನು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪತ್ರ ಸಂಖ್ಯೆ ಕಸಂವಿ/ಸಂಶಿನಿ/12/ಅ/2020–21 ದಿನಾಂಕ: 12.11.2020ರಂತೆ ಸೇವೆಯಿಂದ ಅಮಾನತ್ತು ಗೊಳಿಸಲಾಗಿದೆ.<br>ಬೇಲ್ ಆಧಾರದ ಮೇಲೆ ಇವರು ಬಂಧನದಿಂದ ಬಿಡುಗಡೆ ಹೊಂದಿರುತ್ತಾರೆ. ಈ ಶಿಕ್ಷಕರು ಕಾರ್ಯನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಯವರು ಇವರ ಅಮಾನತ್ತಿನ ಅವಧಿಯನ್ನು ಮಟುಕುಗೊಳಿಸಿ ಕರ್ತವ್ಯಕ್ಕೆ ಹಾಜರುಪಡಿಸಿಕೊಂಡಿರುವುದಿಲ್ಲ. ಸಿದ್ದರಾಜು ಇವರಿಗೆ ಜೀವನಾಧಾರ ಭತ್ಯೆಯನ್ನು ಸಹ ಪಾವತಿಸಿರುವುದಿಲ್ಲ. w/P No: 15698/21 ದಿನಾಂಕ: 08.08.2023ರಂತೆ ಸದರಿ ನೌಕರರ ಅಮಾನತ್ತನ್ನು ಮೊಟಕುಗೊಳಿಸಿ ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳುವಂತೆ ಹಾಗೂ ಸಿದ್ದರಾಜು ಎಂ., ಇವರಿಗೆ ಜೀವನಾಧಾರ ಭತ್ಯೆಯನ್ನು ಪಾವತಿಸಲು ಕ್ರಮವಹಿಸುವಂತೆ ಈ ಸಂಬಂಧ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ಸಂಬಂಧಪಟ್ಟ ಸಂಸ್ಥೆಗಳಿಗೆ ನಿರ್ದೇಶನ ನೀಡಿದಾಗ್ಯೂ ಸಹ ಪಾಲನೆ ಆಗಿರುವುದಿಲ್ಲ. ಬಾಧಿತ ನೌಕರರು ನ್ಯಾಯಾಲಯದ ತೀರ್ಪು ಪಾಲನೆ ಆಗದಿರುವುದನ್ನು ಖಂಡಿಸಿ ನ್ಯಾಯಾಂಗ ನಿಂದನಾ ದಾವೆಯನ್ನು (CCC No:108/2024) ದಾಖಲಿಸಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಸ್ಕೃತ ವಿಶ್ವವಿದ್ಯಾಲಯದ ವಕೀಲರಾದ ಕುಮಾರ್ & ಕುಮಾರ್ ರವರಿಗೆ ಕಾನೂನು ಅಭಿಪ್ರಾಯ ಕೋರಲಾಗಿತ್ತು. ಅವರು ಅಭಿಪ್ರಾಯ ನೀಡಿ ನ್ಯಾಯಾಲಯದ ಆದೇಶವನ್ನು ಪಾಲಿಸುವಂತೆ ಹಾಗೂ ಡಿಲೇ ಕಂಡೋನ್ ಮಾಡಬಹುದೆಂದು ತಿಳಿಸಿರುತ್ತಾರೆ. ಹಾಗಾಗಿ ಸಿದ್ದರಾಜು ಎಂ. ಇವರಿಗೆ ನಿಯಮಾನುಸಾರ ಜೀವನಾಧಾರ ಭತ್ಯೆಯನ್ನು ಪಾವತಿಸುವ ಸಂಬಂಧ ಹಾಗೂ ಮೇಲೆ ಹೇಳಲಾದ ಮೂರು ಜನ ಸಿಬ್ಬಂದಿಗಳ ಅಮಾನತ್ತನ್ನು ತೆರವುಗೊಳಿಸಿ ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳುವಂತೆ ಸಂಬಂಧಪಟ್ಟ ಸಂಸ್ಥೆಯವರಿಗೆ ಆದೇಶವನ್ನು ನೀಡಲು ಅನುಮೋದನೆಗೆ ಸಲ್ಲಿಸಿದೆ. |
| ನಿರ್ಣಯ | **ಸಿದ್ಧರಾಜು. ಎಂ, ವಿಶ್ವನಾಥ ಕೆ. ಹಾಗೂ ಪರಶಿವ ಪಿ. ಇವರ ಅಮಾನತ್ತನ್ನು ತೆರವುಗೊಳಿಸಿ ಕರ್ತವ್ಯಕ್ಕೆ ಹಾಜರುಪಡಿಸಿಕೊಂಡು ನಿಯಮಾನುಸಾರ ಜೀವನ ನಿರ್ವಹಣಾ ಭತ್ಯೆಯನ್ನು ಮಂಜೂರು ಮಾಡಲು ಸಭೆಯು ಅನುಮೋದಿಸಿತು. ಮುಂದುವರೆದು ಸಕ್ಷಮ ಪ್ರಾಧಿಕಾರವು ಇಲಾಖಾ ವಿಚಾರಣೆಯನ್ನು ಕೈಗೊಂಡು ನಿಯಮಾನುಸಾರ ಕ್ರಮವಹಿಸಲು ಸೂಚಿಸಲು ತೀರ್ಮಾನಿಸಲಾಯಿತು.** |
| **ವಿಷಯ 21** | **ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರ ಶುಲ್ಕ ಪಾವತಿಸುವ ಬಗ್ಗೆ.** |
| **ಟಿಪ್ಪಣಿ** | 1). ವಿಶ್ವನಾಥ್.ಕೆ., ಬಿನ್ ಲೇಟ್ ಕೃಷ್ಣ ಭಟ್ ಕೆ., ಮುಖ್ಯಶಿಕ್ಷಕರು, ಶ್ರೀ ವಿಶ್ವಚೇತನ ಸಂಸ್ಕೃತ ಪಾಠಶಾಲೆ, ಎನ್.ಆರ್. ಮೊಹಲ್ಲಾ, ಮೈಸೂರು. 2). ಪರಶಿವ ಪಿ., ಬಿನ್ ಪುಟ್ಟಸ್ವಾಮಿ, ಸಹಶಿಕ್ಷಕರು, ಶ್ರೀ ವಿಶ್ವಚೇತನ ಸಂಸ್ಕೃತ ಪಾಠಶಾಲೆ, ಎನ್.ಆರ್. ಮೊಹಲ್ಲಾ, 3). ಸಿದ್ದರಾಜು ಎಂ., ಬಿನ್ ಮಹದೇವಪ್ಪ, ಮುಖ್ಯಶಿಕ್ಷಕರು, ಮಡಿವಾಳಸ್ವಾಮಿ ಸಂಸ್ಕೃತ ಪಾಠಶಾಲೆ, ರಾಮಾನುಜ ರಸ್ತೆ, ಮೈಸೂರು – ಈ ಮೂವರು ಶಿಕ್ಷಕರ ಅಮಾನತ್ತು ರದ್ದುಪಡಿಸಿ ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳುವ ಹಾಗೂ ಜೀವನಾಧಾರ ಭತ್ಯೆಯನ್ನು ಮಂಜೂರು ಮಾಡುವುದಕ್ಕೆ ಸಂಬಂಧಿಸಿದಂತೆ ಕಾನೂನು ಅಭಿಪ್ರಾಯ ನೀಡಿದ ಕುಮಾರ್ & ಕುಮಾರ್ ರವರಿಗೆ ಶುಲ್ಕ ರೂ 12500/–ಗಳನ್ನು ಪಾವತಿಸಲು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಕಾನೂನು ಅಭಿಪ್ರಾಯ ನೀಡಿದ ಕುಮಾರ್ & ಕುಮಾರ್ ರವರಿಗೆ ಶುಲ್ಕ ರೂ 12500/–ಗಳನ್ನು ಪಾವತಿಸಲು** |

| | |
|---|---|
| | **ಸಭೆಯು ಅನುಮೋದಿಸಿತು. ಮುಂದುವರೆದು ಇಂತಹ ಪ್ರಕರಣಗಳಲ್ಲಿ ಅನಗತ್ಯವಾಗಿ ಕಾನೂನು ಅಭಿಪ್ರಾಯ ಪಡೆಯದೇ ನಿಯಮಾನುಸಾರ ವಿಶ್ವವಿದ್ಯಾಲಯದ ಹಂತದಲ್ಲಿ ಅಗತ್ಯ ಕ್ರಮವಹಿಸಲು ಸೂಚಿಸಲಾಯಿತು.** |
| **ವಿಷಯ 22** | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ ರಾಜ್ಯದ ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ವಲಯವಾರು 300 ಸಂಸ್ಕೃತೋತ್ಸವ ಕಾರ್ಯಕ್ರಮವನ್ನು ನಡೆಸುವ ಬಗ್ಗೆ.** |
| **ಟಿಪ್ಪಣಿ** | ಸಂಸ್ಕೃತ ಭಾಷೆಯ ಪ್ರಚಾರ ಮತ್ತು ಪ್ರಸಾರದ ದೃಷ್ಟಿಯಿಂದ ಶ್ರಾವಣ ಪೂರ್ಣಿಮೆಯ ದಿನದಂದು ಸಂಸ್ಕೃತೋತ್ಸವವನ್ನು ಆಚರಿಸಬೇಕೆಂದು ಭಾರತ ಘನ ಸರ್ಕಾರವು ಈ ಹಿಂದೆ ನಿರ್ದೇಶಿಸಿದೆ. ಆದ್ದರಿಂದ ರಾಜ್ಯಾದ್ಯಂತ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ ರಾಜ್ಯದ ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ವಲಯವಾರು 300 ಸಂಸ್ಕೃತೋತ್ಸವ ಕಾರ್ಯಕ್ರಮವನ್ನು ನಡೆಸಲು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಮಾನ್ಯ ನಿರ್ದೇಶಕರು, ವಲಯ ಸಂಯೋಜಕರು ಹಾಗೂ ವಿಷಯ ಪರಿವೀಕ್ಷಕರುಗಳು ಸಭೆ ಸೇರಿ ಅಗಸ್ಟ್ ಮಾಸದಿಂದ ಪ್ರಾರಂಭ ಮಾಡಿ ಸಪ್ಟೆಂಬರ್ 31 ರವರೆಗೆ ನಡೆಸಲು ಉದ್ದೇಶಿಸಿದ್ದು, ಒಂದೊಂದು ಕಾರ್ಯಕ್ರಮಕ್ಕೆ ತಗಲುವ ವೆಚ್ಚವು 3000/-ರೂಗಳಾಗಿದ್ದು, ವಲಯವಾರು300 ಸ್ಥಳಗಳಲ್ಲಿ ನಡೆಯುವ ಕಾರ್ಯಕ್ರಮಕ್ಕೆ 300*3000=900000/-ಒಟ್ಟು ಅಂದಾಜು ಒಂಭತ್ತು ಲಕ್ಷ ರೂಗಳು ವ್ಯಯವಾಗಲಿದ್ದು, ರಾಜ್ಯಾದ್ಯಂತ ಸಂಸ್ಕೃತೋತ್ಸವ ಕಾರ್ಯಕ್ರವನ್ನು ನಡೆಸಲು ಪ್ರಶಾಸನ ಸಮಿತಿಯ ಅನುಮೋದನೆಗೆ ಮಂಡಿಸಿದೆ. |

| ಕ್ರ.ಸಂ | ವಲಯ | ಕಾರ್ಯಕ್ರಮಗಳ ಸಂಖ್ಯೆ | ಮೊತ್ತ | ಒಟ್ಟು |
|---|---|---|---|---|
| 1 | ಬೆಂಗಳೂರು | 50 | 3000*50 | 1,50,000 |
| 2 | ಮೈಸೂರು | 50 | 3000*50 | 1,50,000 |
| 3 | ಧಾರವಾಡ | 50 | 3000*50 | 1,50,000 |
| 4 | ಚಿತ್ರದುರ್ಗ | 75 | 3000*75 | 2,25,000 |
| 5 | ಬೆಳಗಾವಿ | 50 | 3000*50 | 1,50,000 |
| 6 | ಗುಲ್ಬರ್ಗ | 25 | 3000*25 | 75,000 |
| | | **300** | **ಒಟ್ಟು ಮೊತ್ತ** | **9,00000** |

| | |
|---|---|
| **ನಿರ್ಣಯ** | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ ರಾಜ್ಯದ ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ವಲಯವಾರು 300 ಸಂಸ್ಕೃತೋತ್ಸವ ಕಾರ್ಯಕ್ರಮವನ್ನು ನಡೆಸಲು ಸಭೆಯು ಅನುಮೋದಿಸಿತು.** |
| **ವಿಷಯ 23** | **ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಲ್ಲಿ 60 ಸಂಸ್ಕೃತೋತ್ಸವ ಕಾರ್ಯಕ್ರಮಗಳನ್ನು ನಡೆಸುವ ಬಗ್ಗೆ.** |
| **ಟಿಪ್ಪಣಿ** | ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಲ್ಲ ಆಗಸ್ಟ್ ಮಾಹೆಯಿಂದ ಪ್ರಾರಂಭಿಸಿ ಸಪ್ಟೆಂಬರ್ ಮಾಹೆಯ ಕೊನೆಯವರೆಗೂ 60 ಸಂಸ್ಕೃತೋತ್ಸವ ಕಾರ್ಯಕ್ರಮಗಳನ್ನು ನಡೆಸಲು ಉದ್ದೇಶಿಸಿದ್ದು, ಒಂದೊಂದು ಕಾರ್ಯಕ್ರಮಕ್ಕೆ ತಗಲುವ ವೆಚ್ಚವು 3000/-ರೂಗಳಾಗಿದ್ದು, 60 ಸ್ಥಳಗಳಲ್ಲಿ ನಡೆಯುವ ಕಾರ್ಯಕ್ರಮಕ್ಕೆ 60*3000=1,80,000/-ಗಳನ್ನು (ಒಂದು ಲಕ್ಷದ ಎಂಭತ್ತು ಸಾವಿರ ರೂಗಳು ಮಾತ್ರ) ಅಂದಾಜಿಸಲಾಗಿದೆ. ಸಂಯೋಜಿತ ಕಾಲೇಜುಗಳಲ್ಲಿ ಸಂಸ್ಕೃತೋತ್ಸವ ಕಾರ್ಯಕ್ರವನ್ನು ನಡೆಸಲು ಪ್ರಶಾಸನ ಸಮಿತಿಯ ಅನುಮೋದನೆಗೆ ಮಂಡಿಸಿದೆ. |
| **ನಿರ್ಣಯ** | **ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಲ್ಲಿ 60 ಸಂಸ್ಕೃತೋತ್ಸವ ಕಾರ್ಯಕ್ರಮಗಳನ್ನು ನಡೆಸಲು ಸಭೆಯು ಅನುಮೋದಿಸಿತು.** |
| **ವಿಷಯ 24** | **OQPD ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವುದಕ್ಕೆ ಘಟನೋತ್ತರ ಅನುಮೋದನೆಯನ್ನು ನೀಡುವ ಬಗೆಗೆ.** |
| **ಟಿಪ್ಪಣಿ** | ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ವಿಶ್ವವಿದ್ಯಾಲಯದ ನಿರ್ವಹಣೆಗಾಗಿ ಜಾರಿಗೆ ತಂದಿರುವ |

| | |
|---|---|
| | UUCMS ಪೋರ್ಟಲ್‌ನಲ್ಲಿ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳನ್ನು ಕಳುಹಿಸಲು OQPD (Online Question Paper Delivery) ಉಪಕ್ರಮವನ್ನು ಹೊಸದಾಗಿ ಜಾರಿಗೊಳಿಸಿದ್ದು, ಎಲ್ಲಾ ವಿಶ್ವವಿದ್ಯಾಲಯಗಳು ಈ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವಂತೆ ಉನ್ನತ ಶಿಕ್ಷಣ ಇಲಾಖೆಯು ಸೂಚಿಸಿರುತ್ತದೆ. ಅದರಂತೆ, ಈ ಉಪಕ್ರಮವನ್ನು ಅಳವಡಿಸಿಕೊಂಡ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಮೊದಲನೆಯದಾಗಿದೆ. ಆದರೆ, ಕೆಲವು ಸಂದರ್ಭಗಳಲ್ಲಿ UUCMS ವೆಬ್‌ಸೈಟ್‌ನಲ್ಲಿ ತಾಂತ್ರಿಕ ತೊಂದರೆಗಳು (Server Error, OTP Generation Delay, Netwrok Issue) ಕಾಣಿಸಿಕೊಂಡಿದ್ದರಿಂದ, ಈ ವಿಷಯಗಳನ್ನು ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದು, ಪ್ರಶ್ನೆಪತ್ರಿಕೆಗಳನ್ನು ಆಯಾ ಕಾಲೇಜುಗಳ ಪ್ರಾಚಾರ್ಯರ ಇ-ಮೇಲ್ ವಿಳಾಸಕ್ಕೆ ಕಳುಹಿಸಿಕೊಡಲಾಗಿದೆ.<br>ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆಪತ್ರಿಕೆಗಳನ್ನು ಕಳುಹಿಸಲು OQPD ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವುದಕ್ಕೆ ಪ್ರಶಾಸನ ಸಮಿತಿಯ ಘಟನೋತ್ತರ ಅನುಮೋದನೆಗಾಗಿ ಹಾಗೂ ಮುಂದಿನ ಪರೀಕ್ಷೆಗಳಲ್ಲಿ UUCMS ವೆಬ್‌ಸೈಟ್‌ನಲ್ಲಿ ತಾಂತ್ರಿಕ ತೊಂದರೆಗಳು ಸಂಭವಿಸಿದಲ್ಲಿ ಇ-ಮೇಲ್ ಮೂಲಕ ಪ್ರಶ್ನೆಪತ್ರಿಕೆಗಳನ್ನು ಕಳುಹಿಸಲು ಅನುಮತಿಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **OQPD ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವುದಕ್ಕೆ ಸಭೆಯು ಅನುಮೋದಿಸಿತು.** |
| ವಿಷಯ 25 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸ್ನಾತಕ-ಸ್ನಾತಕೋತ್ತರ ಹಾಗೂ ಇನ್ನಿತರ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ನೀಡುವ ಬಗೆಗೆ.** |
| **ಟಿಪ್ಪಣಿ** | ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಸಾರ್ವಜನಿಕ ವಿಶ್ವವಿದ್ಯಾಲಯಗಳ ಕುಲಸಚಿವರು ಮತ್ತು ಕುಲಪತಿಗಳೊಂದಿಗೆ ನಡೆಸಿದ ಹಲವಾರು ಸಭೆಗಳಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳ ಭೌತಿಕ ಪ್ರತಿ(Hard Copy)ಗಳನ್ನು ನೀಡದಂತೆ ಮೌಖಿಕವಾಗಿ ಸೂಚಿಸಿರುತ್ತಾರೆ. ಈ ಬಗ್ಗೆ ಕೆಲವು ವಿಶ್ವವಿದ್ಯಾಲಯಗಳು ರಾಜ್ಯಪಾಲರಿಗೆ ಪತ್ರ ಬರೆದು ಸ್ಪಷ್ಟನೆಯನ್ನು ಕೋರಿದ್ದು, ರಾಜ್ಯಪಾಲರು ಪತ್ರ ಸಂಖ್ಯೆ: ಜಿಎಸ್ 19 ಜಿಯುಎಂ 2022; ದಿನಾಂಕ: 27.12.2022ರಲ್ಲಿ, ವಿದ್ಯಾರ್ಥಿಗಳಿಗೆ ಭದ್ರತಾ ವೈಶಿಷ್ಟ್ಯಗಳನ್ನೊಳಗೊಂಡ ಅಂಕಪಟ್ಟಿಗಳು ಮತ್ತು ಪ್ರಮಾಣಪತ್ರಗಳ ಭೌತಿಕ ಪ್ರತಿಗಳನ್ನು ನೀಡುವಂತೆ ಹಾಗೂ Soft Copyಗಳನ್ನು NAD ಮೂಲಕ ಒದಗಿಸುವಂತೆ ಸೂಚಿಸಿರುತ್ತಾರೆ.<br>ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಇಡಿ 29 EGOV 2023, ದಿನಾಂಕ: 16.10.2023ರಲ್ಲಿ 2023-24ನೇ ಶೈಕ್ಷಣಿಕ ಸಾಲಿನಿಂದ ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿನ ಅಧೀನ ಇಲಾಖೆಗಳು, ಸಾರ್ವಜನಿಕ ವಿಶ್ವವಿದ್ಯಾಲಯಗಳು ಹಾಗೂ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ಪದವಿ ಮತ್ತು ಸ್ನಾತಕೋತ್ತರ ಪದವಿ ಅಂಕಪಟ್ಟಿಗಳು, ಪ್ರಮಾಣಪತ್ರಗಳು ಮತ್ತು ಇತರ ಶೈಕ್ಷಣಿಕ ದಾಖಲೆಗಳನ್ನು NAD-Digilockerನಲ್ಲಿ ಡಿಜಿಟಲ್ ರೂಪದಲ್ಲಿ ಕಡ್ಡಾಯವಾಗಿ ಸಂಗ್ರಹಿಸಿಡಲು, ಉನ್ನತ ಶಿಕ್ಷಣದ ವಿದ್ಯಾರ್ಥಿಗಳು ಸದರಿ ಅಂಕಪಟ್ಟಿಗಳ Creditsಗಳನ್ನು ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್(ABC)ನಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಲು ಆದೇಶಿಸಿದೆ. ವಿವಿಧ ನೇಮಕಾತಿ ಪ್ರಾಧಿಕಾರಗಳು/ಸಂಸ್ಥೆಗಳು ನೇಮಕಾತಿ ಸಮಯದಲ್ಲಿ NAD-Digilockerನಲ್ಲಿನ ಅಂಕಪಟ್ಟಿ ಹಾಗೂ ಪ್ರಮಾಣಪತ್ರಗಳನ್ನು ದೃಢೀಕೃತವೆಂದು ಪರಿಗಣಿಸುವಂತೆ ಆದೇಶಿಸಿದೆ.' ಆದರೆ, ಅಂಕಪಟ್ಟಿಗಳ ಭೌತಿಕ ಪ್ರತಿಗಳನ್ನು ಮುದ್ರಿಸಿ ನೀಡುವ ಬಗೆಗೆ ಯಾವುದೇ ಪರಿಷ್ಕೃತ ಆದೇಶಗಳನ್ನು ಉನ್ನತ ಶಿಕ್ಷಣ ಇಲಾಖೆಯು ಹೊರಡಿಸಿರುವುದಿಲ್ಲ. ಅನಂತರವೂ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ನಡೆಸಿದ ಕುಲಸಚಿವರ ಸಭೆಗಳಲ್ಲಿ ಅಂಕಪಟ್ಟಿಗಳ ಭೌತಿಕ ಪ್ರತಿಗಳನ್ನು ನೀಡದಂತೆ ಮೌಖಿಕವಾಗಿ ತಿಳಿಸಿರುತ್ತಾರೆ. |

| | |
|---|---|
| | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2021-22ನೇ ಸಾಲಿನಿಂದ ಈವರೆಗೆ ಸ್ನಾತಕ-ಸ್ನಾತಕೋತ್ತರ ಹಾಗೂ ಇನ್ನಿತರ ಪರೀಕ್ಷೆಗಳನ್ನು ಬರೆದ ವಿದ್ಯಾರ್ಥಿಗಳಿಗೆ ಭೌತಿಕ ಅಂಕಪಟ್ಟಿಗಳನ್ನು ಮುದ್ರಿಸಿ ನೀಡಿರುವುದಿಲ್ಲ. ಅಂಕಪಟ್ಟಿಗಳು ಮತ್ತು ಪ್ರಮಾಣಪತ್ರಗಳ ದಾಖಲೆಗಳನ್ನು National Academic Depository (NAD)ನಲ್ಲಿ ಸಂಗ್ರಹಿಸಿಡಲಾಗುತ್ತಿದೆ. 2021-22ನೇ ಶೈಕ್ಷಣಿಕ ಸಾಲಿನಿಂದ ನಡೆದ ಸ್ನಾತಕ-ಸ್ನಾತಕೋತ್ತರ, ಸರ್ಟಿಫಿಕೇಟ್, ಡಿಪ್ಲೊಮಾ, ಪಿ.ಜಿ. ಡಿಪ್ಲೊಮಾ ಪರೀಕ್ಷೆಗಳನ್ನು ಬರೆದ ವಿದ್ಯಾರ್ಥಿಗಳಿಗೆ ನೀಡಲು ಅಂದಾಜು 10,000 ಅಂಕಪಟ್ಟಿಗಳು ಬೇಕಾಗಬಹುದಾಗಿದ್ದು, ಅಂಕಪಟ್ಟಿಗಳನ್ನು (Pre-printed Marks Card) ಮುದ್ರಿಸಲು ಅನುಮತಿಗಾಗಿ ಪ್ರಶಾಸನ ಸಮಿತಿಯಲ್ಲಿ ಮಂಡಿಸಿದೆ. |
| ನಿರ್ಣಯ | **ವಿಶ್ವವಿದ್ಯಾಲಯಗಳಲ್ಲಿ ಅಂಕಪಟ್ಟಿಗಳನ್ನು ಮುದ್ರಿಸುವ ವಿಷಯವು ಸರ್ಕಾರದ ಹಂತದಲ್ಲಿ ಚರ್ಚೆಯಲ್ಲಿರುವುದರಿಂದ ಸ್ನಾತಕ-ಸ್ನಾತಕೋತ್ತರ ಹಾಗೂ ಇನ್ನಿತರ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ನೀಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು.** |
| **ವಿಷಯ 26** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಅಳವಡಿಸುವ ಬಗೆಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನದಲ್ಲಿ ರಾಜ್ಯಾದ್ಯಂತ ಪ್ರಸ್ತುತ ಒಟ್ಟು 27 ಪರೀಕ್ಷಾ ಕೇಂದ್ರಗಳಿಗೆ ಅನುಮತಿಯನ್ನು ನೀಡಲಾಗಿದ್ದು, ಈ ಪರೀಕ್ಷಾ ಕೇಂದ್ರಗಳಲ್ಲಿ ಸ್ನಾತಕ-ಸ್ನಾತಕೋತ್ತರ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಈ ಪರೀಕ್ಷಾ ಕೇಂದ್ರಗಳಲ್ಲಿ ನಡೆಯುವ ಪರೀಕ್ಷಾ ಕಾರ್ಯಕಲಾಪಗಳನ್ನು ವಿಶ್ವವಿದ್ಯಾಲಯದಿಂದಲೇ ಮೇಲ್ವಿಚಾರಣೆ ಮಾಡುವ ಹಾಗೂ ಪರೀಕ್ಷೆಗಳಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ಪರೀಕ್ಷೆಗಳು ನಡೆಯುವ ಕೊಠಡಿಗಳಿಗೆ ಸಿಸಿಟಿವಿಗಳನ್ನು ಅಳವಡಿಸಿಕೊಳ್ಳಬಹುದಾಗಿರುತ್ತದೆ. ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ |
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಅಳವಡಿಸಲು ಸಭೆಯು ಅನುಮೋದಿಸಿತು.** |
| **ವಿಷಯ 27** | **ರಾಜ್ಯ ವೇತನ ಶ್ರೇಣಿಯ ಬೋಧಕ/ಬೋಧಕೇತರ ಹಾಗೂ ಅತಿಥಿ ಉಪನ್ಯಾಸಕರಿಗೆ ಮೌಲ್ಯಮಾಪನ ಹಾಗೂ ಪರೀಕ್ಷಾ ಸಂಬಂಧಿ ಕಾರ್ಯಗಳ ಭತ್ಯೆಗಳನ್ನು ನೀಡುವ ಕುರಿತು.** |
| **ಟಿಪ್ಪಣಿ** | ಸರ್ಕಾರದ ಆದೇಶ ಸಂಖ್ಯೆ ಇಡಿ 04 ಯು.ಎನ್.ಇ 2019 ದಿನಾಂಕ 11.05.2022ರಂತೆ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ರಾಜ್ಯ ವೇತನ ಶ್ರೇಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರು, ಅತಿಥಿ ಉಪನ್ಯಾಸಕರು ಹಾಗೂ ಅಂಶಕಾಲಿಕ/ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರಿಗೆ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಗೌರವ ಧನ, ದಿನಭತ್ಯೆ, ಪ್ರಯಾಣಭತ್ಯೆಗಳನ್ನು ನಿಗದಿಪಡಿಸಬಹುದಾಗಿದ್ದು ಸದರಿ ಆದೇಶದನ್ವಯ ರಾಜ್ಯ ವೇತನ ಶ್ರೇಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಾದ ಯೋಜನಾ ಸಹಾಯಕರು (ಶೈಕ್ಷಣಿಕ), ಉಪನ್ಯಾಸಕರು, ಅತಿಥಿ ಉಪನ್ಯಾಸಕರು ಹಾಗೂ ಅಂಶಕಾಲಿಕ/ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರಿಗೆ ಹಾಗೂ ಮೌಲ್ಯಮಾಪನ ಸಂಬಂಧಿ ಕಾರ್ಯಗಳನ್ನು ಹೆಚ್ಚುವರಿಯಾಗಿ ನಿರ್ವಹಿಸುವ ಬೋಧಕೇತರ ಸಿಬ್ಬಂದಿಗಳಿಗೆ ಗೌರವಧನ, ದಿನಭತ್ಯೆ, ಪ್ರಯಾಣಭತ್ಯೆಗಳನ್ನು ನೀಡುವ ಕುರಿತು ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ರಾಜ್ಯ ವೇತನ ಶ್ರೇಣಿಯ ಬೋಧಕ/ಬೋಧಕೇತರ ಹಾಗೂ ಅತಿಥಿ ಉಪನ್ಯಾಸಕರಿಗೆ ಮೌಲ್ಯಮಾಪನ ಹಾಗೂ ಪರೀಕ್ಷಾ ಸಂಬಂಧಿ ಕಾರ್ಯಗಳ ಭತ್ಯೆಗಳನ್ನು ನೀಡಲು** ಸಭೆಯು ಅನುಮೋದಿಸಿತು. |

| | |
|---|---|
| ವಿಷಯ 28 | **NAD-Digilockerನಲ್ಲಿ ಅಂಕಪಟ್ಟಿ ಹಾಗೂ ಪ್ರಮಾಣಪತ್ರಗಳನ್ನು Upload ಮಾಡುವ ಕುರಿತು.** |
| **ಟಿಪ್ಪಣಿ** | ಸರಕಾರದ ಆದೇಶ ಸಂಖ್ಯೆ: ಇಡಿ 29 EGOV 2023; ದಿನಾಂಕ: 16.10.2023ರಂತೆ ಪ್ರಸ್ತುತ NAD-Digilockerನಲ್ಲಿನ ಅಂಕಪಟ್ಟಿಗಳನ್ನು ಹಾಗೂ ಪ್ರಮಾಣಪತ್ರಗಳು ದೃಢೀಕೃತವಾಗಿರುವುದರಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2021-22ನೇ ಸಾಲಿನಿಂದ ಅನ್ವಯವಾಗುವಂತೆ ಎಲ್ಲಾ ವಿದ್ಯಾರ್ಥಿಗಳ ಅಂಕಪತ್ರ ಹಾಗೂ ಪ್ರಮಾಣಪತ್ರಗಳು NAD-Digilocker ನಲ್ಲಿಯೂ ಲಭ್ಯವಾಗುವಂತೆ ಕ್ರಮವಹಿಸುತ್ತಿದ್ದು, ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಸಲ್ಲಿಸಿದೆ. |
| ನಿರ್ಣಯ | **NAD-Digilockerನಲ್ಲಿ ಅಂಕಪಟ್ಟಿ ಹಾಗೂ ಪ್ರಮಾಣಪತ್ರಗಳನ್ನು Upload ಮಾಡಲು ಸಭೆಯು ಅನುಮೋದಿಸಿತು.** |
| ವಿಷಯ 29 | **ಅತಿಥಿ ಉಪನ್ಯಾಸಕರ ನೇಮಕಾತಿ ಅನುಮೋದಿಸುವ ಕುರಿತು** |
| **ಟಿಪ್ಪಣಿ** | ವಿಶ್ವವಿದ್ಯಾಲಯಕ್ಕೆ ಅವಶ್ಯವಿದ್ದ 13 ಅತಿಥಿ ಉಪನ್ಯಾಸಕರ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಅದರಂತೆ 2024-25ನೇ ಸಾಲಿಗೆ ಈ ಕೆಳಕಂಡಂತೆ 09 ಅತಿಥಿ ಉಪನ್ಯಾಸಕರು ನೇಮಕಗೊಂಡಿರುತ್ತಾರೆ. ಅತಿಥಿ ಉಪನ್ಯಾಸಕರ ಪಟ್ಟಿ ಈ ಕೆಳಕಂಡಂತಿದೆ. |

| ಕ್ರ.ಸಂ. | ನೇಮಕಗೊಂಡವರ ಹೆಸರು | ವಿಭಾಗ |
|---|---|---|
| 1 | ಡಾ. ಪಿ.ಆರ್ ಅರ್ಚನಾಕಾರಂತ | ವ್ಯಾಕರಣ ವಿಭಾಗ |
| 2 | ಡಾ. ವೇದೇಶ ನಾಗಸಂಪಿಗೆ | ನ್ಯಾಯ ಮತ್ತು ವೈಶೇಶಿಕ ವಿಭಾಗ |
| 3 | ಡಾ. ಚೈತ್ರ ಬಿ. | ಯೋಗ ತೆರಪಿ ಮತ್ತು ಕೌನ್ಸೆಲಿಂಗ್ |
| 4 | ಡಾ. ಶ್ರೀಲಲಿತಾ ಅವಿನಾಶ್ | ಯೋಗ ತೆರಪಿ ಮತ್ತು ಕೌನ್ಸೆಲಿಂಗ್ |
| 5 | ಶ್ರೀ ಅಜಿತ್ ನಿರಂಜನ್ ವೈ.ಎ. | ವೇದಾಂತ ವಿಭಾಗ |
| 6 | ಡಾ. ನವೀನ್ ಕೆ. | ವ್ಯಾಕರಣ ವಿಭಾಗ |
| 7 | ಡಾ. ಕೆ.ಎಸ್. ಕೃಷ್ಣ | ಶಾಸ್ತ್ರ ನಿಕಾಯ |
| 8 | ಶ್ರೀಮತಿ ಸುರೇಖಾ ಕಾಮತ್ | ಹಸ್ತಪ್ರತಿಶಾಸ್ತ್ರ |
| 9 | ಮಂಜಮ್ಮ ಪಿ. | ಇತಿಹಾಸ |

ಬಾಕಿ ಖಾಲಿ ಇರುವ ವ್ಯಾಕರಣ ವಿಭಾಗಕ್ಕೆ -01 ಮತ್ತು ಸಾಂಖ್ಯ ಮತ್ತು ಯೋಗ ವಿಭಾಗಕ್ಕೆ- 02 ಹುದ್ದೆಗಳಿಗೆ ದಿನಾಂಕ: 05.08.2024ರಂದು ಮತ್ತು ಸೈಕಾಲಜಿ 01 ಹುದ್ದೆಗೆ ದಿನಾಂಕ: 13.08.2024ರಂದು ಅಧಿಸೂಚನೆಗಳನ್ನು ಹೊರಡಿಸಲಾಗಿದೆ. ಸದರಿ ವಿಷಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| | |
|---|---|
| ನಿರ್ಣಯ | **ಆಂತರಿಕ ಸಂಪನ್ಮೂಲದಿಂದ ವೇತನವನ್ನು ಭರಿಸುವ ಷರತ್ತಿಗೊಳಪಟ್ಟು ಅತಿಥಿ ಉಪನ್ಯಾಸಕರ ನೇಮಕಾತಿಯನ್ನು ಸಭೆಯು ಅನುಮೋದಿಸಿತು.** |
| ವಿಷಯ 30 | **ವಿಶ್ವವಿದ್ಯಾಲಯದ ಕಟ್ಟಡದ ಮೇಲೆ ಕಬ್ಬಿಣದ ಶೀಟಿನ ಶೆಡ್ ನಿರ್ಮಿಸಲು ಅನುಮೋದನೆ ಕೋರಿ.** |
| **ಟಿಪ್ಪಣಿ** | ದಿನಾಂಕ: 16.09.2022ರಂದು ನಡೆದ ಪ್ರಶಾಸನ ಸಮಿತಿಯ 65ನೇ ಸಭೆಯಲ್ಲಿ, ವಿಶ್ವವಿದ್ಯಾಲಯದ ಕಟ್ಟಡದ ಮೇಲೆ ಕಬ್ಬಿಣದ ಶೀಟಿನ ಶೆಡ್ ನಿರ್ಮಿಸಲು 30,00,000.00 ರೂ.ಗಳ (ಮೂವತ್ತು ಲಕ್ಷ) ಅಂದಾಜಿಗೆ ಅನುಮೋದನೆ ಪಡೆದು ಕೆ.ಆರ್.ಐ.ಡಿ.ಎಲ್.ಗೆ ದಿನಾಂಕ 19.12.2022ರಂದು ಕಾರ್ಯಾದೇಶ ನೀಡಲಾಗಿತ್ತು. ಹಾಗೂ 15,00,000/-ಗಳನ್ನು ಮುಂಗಡವಾಗಿ ನೀಡಲಾಗಿತ್ತು. ಆದರೆ, ಕಾರಣಾಂತರಗಳಿಂದ ಕಾಮಾಗಾರಿ ಪಾರಂಭಗೊಳ್ಳದೇ ಸ್ಥಗಿತಗೊಂಡಿರುತ್ತದೆ. ಈಗಾಗಲೇ ನೀಡಲಾಗಿರುವ ಮುಂಗಡವನ್ನು ಹಿಂಪಡೆದು, ಪರಿಷ್ಕೃತ ಅಂದಾಜು ಪಟ್ಟಿಯನ್ನು ಪಡೆದು ಹೊಸದಾಗಿ 30,00,000/- ರೂಗಳಿಗೆ ಕಾಮಗಾರಿಯನ್ನು ಕೈಗೊಳ್ಳಬೇಕಾಗಿದೆ. ಹಾಗಾಗಿ ಈ ವಿಷಯವನ್ನು ಅನುಮೋದನೆಗೆ ಮಂಡಿಸಿದೆ. |

**ನಿರ್ಣಯ**

**ವಿಶ್ವವಿದ್ಯಾಲಯದ ಕಟ್ಟಡದ ಮೇಲೆ ಕಬ್ಬಿಣದ ಶೀಟಿನ ಶೆಡ್ ನಿರ್ಮಿಸಲು 4 ಜಿ ವಿನಾಯಿತಿ ಇರುವ ಸಂಸ್ಥೆಯಿಂದ ಅಥವಾ ಕೆ.ಟಿ.ಪಿ.ಪಿ. ನಿಯಮಾನುಸಾರ ಟೆಂಡರ್ ಕರೆದು ಕ್ರಮವಹಿಸಲು ಸಭೆಯು ತೀರ್ಮಾನಿಸಲಾಯಿತು.**

**ವಿಷಯ 31**

**ಮಹಾರಾಜ ಸರ್ಕಾರಿ ಸಂಸ್ಕೃತ ಕಾಲೇಜು, ಮೈಸೂರು ಇಲ್ಲಿ ವಿವಿಧ ಪದವಿ/ಸ್ನಾತಕೋತ್ತರ ಪದವಿ ಕೋರ್ಸ್ ಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.**

**ಟಿಪ್ಪಣಿ**

ಪ್ರಾಚಾರ್ಯರು, ಮಹಾರಾಜ ಸರ್ಕಾರಿ ಸಂಸ್ಕೃತ ಕಾಲೇಜು, ಮೈಸೂರು ಇವರು ದಿ: 05.03.2024ರ ಪತ್ರದಲ್ಲಿ "ಬಹಳ ಪ್ರಾಚೀನವಾದ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ಆಗಮ ವಿಭಾಗವೂ ಸಹ ಇದ್ದು, ಇದರಲ್ಲಿ ಶೈವಾಗಮ, ವೈಖಾನಸಾಗಮ, ಪಾಂಚರಾತ್ರಾಗಮ, ತಂತ್ರಸಾರಾಗಮ, ವೀರಶೈವಾಗಮ, ಜೈನಾಗಮಗಳಲ್ಲಿ ಪ್ರವರ /ಪ್ರವೀಣ ಎಂಬ ಎರಡು ಹಂತಗಳಿರುತ್ತವೆ. ಈ ಕೋರ್ಸ್‌ಗಳಿಗೆ ಸಂಬಂಧಿಸಿದ ಪ್ರಸಿದ್ಧ ಪರೀಕ್ಷೆಗಳನ್ನು ಕರ್ನಾಟಕ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಯು ನಡೆಸಿ ಉತ್ತೀರ್ಣರಾದವರಿಗೆ ಅಂಕಪಟ್ಟಿ ಹಾಗೂ ಅರ್ಹತಾಪತ್ರವನ್ನು ನೀಡುತ್ತಾ ಬಂದಿರುತ್ತದೆ. ನಂತರದಲ್ಲಿ ಆಗಮ ಶಾಸ್ತ್ರಗಳ ಬಗ್ಗೆ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಅವಶ್ಯಕತೆಯಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಈಗಾಗಲೇ ನಡೆಸುತ್ತಿರುವ ಹಲವಾರು ಕೋರ್ಸ್‌ಗಳ ಜೊತೆಯಲ್ಲಿ ಆಗಮ ಶಾಸ್ತ್ರಗಳ ವಿದ್ವತ್/ಬಿ.ಎ./ಶಾಸ್ತ್ರಿ ಮತ್ತು ಆಚಾರ್ಯ/ಎಂ.ಎ. ತರಗತಿಗಳನ್ನು ಪ್ರಾರಂಭಿಸಿದಲ್ಲಿ ಹೆಚ್ಚಿನ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಈ ವಿಷಯಗಳನ್ನು ಬೋಧಿಸಲು ನುರಿತ ವಿದ್ವಾಂಸರನ್ನು ತಮ್ಮ ವಿಶ್ವವಿದ್ಯಾಲಯದ ವತಿಯಿಂದಲೇ ನೇಮಕ ಮಾಡಿ ಅವರಿಗೆ ನೀಡಬೇಕಾದ ವೇತನಾದಿ ಸೌಲಭ್ಯಗಳನ್ನು ಸರ್ಕಾರಕ್ಕೆ ಹೊರೆಯಾಗದಂತೆ ತಾವೇ ಭರಿಸಬಹುದಾಗಿದೆ" ಎಂದು ಕೋರಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 129 ಯುಎನ್ಇ 2024, ದಿ: 03.07.2024 ರಲ್ಲಿ ಈ ಕಾಲೇಜಿಗೆ ಯೋಗ ಮತ್ತು ಆಗಮ ವಿಭಾಗದಲ್ಲಿ ಬಿ.ಎ. ಕೋರ್ಸ್ ಆರಂಭಕ್ಕೆ ಅನುಮತಿ ನೀಡಲಾಗಿದ್ದು, ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ಕೋರ್ಸ್ | ವಿಷಯ | ವಿದ್ಯಾರ್ಥಿ ಪ್ರಮಾಣ |
|---|---|---|---|
| 1 | ಬಿ.ಎಸ್‌ಸಿ. | ಯೋಗ | 20 |
| 2 | ಬಿ.ಎ. | ಶೈವಾಗಮ | 20 |
| 3 | ಬಿ.ಎ. | ವೈಖಾನಸಾಗಮ | 20 |
| 4 | ಬಿ.ಎ. | ಪಾಂಚರಾತ್ರಾಗಮ | 20 |
| 5 | ಬಿ.ಎ. | ತಂತ್ರಸಾರಾಗಮ | 20 |
| 6 | ಬಿ.ಎ. | ವಾತುಲಾದ್ಯಾಗಮ | 20 |
| 7 | ಬಿ.ಎ. | ವೀರಶೈವಾಗಮ | 20 |
| 8 | ಬಿ.ಎ. | ಜೈನಾಗಮ | 20 |

ಈ ಬಗ್ಗೆ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ**

**ಮಹಾರಾಜ ಸರ್ಕಾರಿ ಸಂಸ್ಕೃತ ಕಾಲೇಜು, ಮೈಸೂರು ಇಲ್ಲಿ ವಿವಿಧ ಪದವಿ/ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಸಭೆಯು ಅನುಮೋದಿಸಿತು.**

**ವಿಷಯ 32**

**ನೂತನ ಕಾಲೇಜಿಗೆ/ಕೋರ್ಸಿಗೆ ಅನುಮತಿ/ಸಂಯೋಜನೆಯನ್ನು ನೀಡುವ ಬಗ್ಗೆ.**

**ಟಿಪ್ಪಣಿ**

**Valmiki College of Vedic Wisdom, Ragihalli, Anekal, Banglore** ಈ ಸಂಸ್ಥೆಯು ಪದವಿ ಕೋರ್ಸನ್ನು ಪ್ರಾರಂಭಿಸಲು ಅನುಮತಿ ಕೋರಿದ್ದು, **UUCMS** ಮೂಲಕ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ಶ್ರೀ ಗುರುಸಾರ್ವಭೌಮ ವೇದ ಸಂಸ್ಕೃತ ಕಾಲೇಜು, ಎನ್. ಎಸ್.ಆರ್. ಎಸ್. ಮಠ, ಜವಾಹರ ನಗರ, ರಾಯಚೂರು ಸಂಸ್ಥೆಯು ಸ್ನಾತಕೋತ್ತರ ಪದವಿ ಕೋರ್ಸನ್ನು ಪ್ರಾರಂಭಿಸಲು ಅನುಮತಿ ಕೋರಿದ್ದು, **UUCMS** ಮೂಲಕ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| | |
|---|---|
| ನಿರ್ಣಯ | **ನೂತನ ಕಾಲೇಜಿಗೆ/ಕೋರ್ಸಿಗೆ ಅನುಮತಿ/ಸಂಯೋಜನೆಯನ್ನು ನೀಡುವ ಸಂಬಂಧ ಸರ್ಕಾರದ ಅನುಮತಿ ಪಡೆದು ಕ್ರಮವಹಿಸಲು ಸೂಚಿಸಿತು.** |
| **ವಿಷಯ 33** | **ಗ್ರಂಥಾಲಯ ವಿಭಾಗದಿಂದ ಮಾಸಿಕ "Book Talk" ಕಾರ್ಯಕ್ರಮವನ್ನು ಆಯೋಜಿಸುವ ಬಗ್ಗೆ.** |
| **ಟಿಪ್ಪಣಿ** | ಸಂಸ್ಕೃತ ಪುಸ್ತಕಗಳ ಪ್ರಕಾಶನವು ವಿರಳವಾಗುತ್ತಿದೆ. ಪ್ರಕಾಶನಗೊಳ್ಳುತ್ತಿರುವ ವಿವಿಧ ಸಂಸ್ಕೃತ ಪುಸ್ತಕಗಳ ವಸ್ತುನಿಷ್ಠ ವಿಮರ್ಶೆಯಿಂದ ಲೇಖಕರಿಗೆ, ಪ್ರಕಾಶಕರಿಗೆ ಮತ್ತು ಸಂಸ್ಕೃತ ಆಸಕ್ತರಿಗೆ ಪ್ರೋತ್ಸಾಹ ದೊರಕುತ್ತದೆ. ಆದರೆ ಸಂಸ್ಕೃತ ಪುಸ್ತಕಗಳ ವಿಮರ್ಶೆಯೂ ಸಹ ವಿರಳವಾಗಿದೆ. ಆದ್ದರಿಂದ ಸಂಸ್ಕೃತ ಪ್ರಕಾಶನ, ಲೇಖನ, ವಾಚನ ಸಂಪ್ರದಾಯವನ್ನು ಉತ್ತೇಜಿಸುವ ದೃಷ್ಟಿಯಿಂದ "Book Talk" ಕಾರ್ಯಕ್ರಮದ ಆಯೋಜನೆಯು ಸಂಸ್ಕೃತ ಕ್ಷೇತ್ರಕ್ಕೆ ಉತ್ತಮ ಕೊಡುಗೆಯಾಗುತ್ತದೆ. ಆದ್ದರಿಂದ ವಿಶ್ವವಿದ್ಯಾಲಯದ ಗ್ರಂಥಾಲಯ ವಿಭಾಗದಿಂದ ಪ್ರತಿ ತಿಂಗಳು "Book Talk" ಕಾರ್ಯಕ್ರಮವನ್ನು online/Offline ಮೂಲಕ ಆಯೋಜಿಸಲು ಹಾಗೂ ಭಾಗವಹಿಸುವ ಸಂಪನ್ಮೂಲ ವ್ಯಕ್ತಿಗಳಿಗೆ ನಿಯಮಾನುಸಾರ ಭತ್ಯೆ ಪಾವತಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಗ್ರಂಥಾಲಯ ವಿಭಾಗದಿಂದ ಮಾಸಿಕ "Book Talk" ಕಾರ್ಯಕ್ರಮವನ್ನು ಆಯೋಜಿಸಲು ಸಭೆಯು ಅನುಮೋದಿಸಿತು.** |
| **ವಿಷಯ 34** | **ಡಾ. ವಿನಯ್ ಪಿ., ಸಹಾಯಕ ಪ್ರಾಧ್ಯಾಪಕರು, ವೇದಾಂತ ವಿಭಾಗ ಇವರನ್ನು ಫ್ಯಾಕಲ್ಟಿ ಆಫ್ ವೇದಿಕ್ ಸ್ಟಡೀಸ್ ನಿಕಾಯದ ಡೀನ್‌ರಾಗಿ ಪ್ರಭಾರದಲ್ಲಿರಿಸುವ ಬಗ್ಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ – 2009ರ ಉಪಬಂಧ 49ರಲ್ಲಿ ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ನಿಕಾಯಗಳನ್ನು ಹೇಳಿದ್ದು, ಅದರಲ್ಲಿ ಫ್ಯಾಕಲ್ಟಿ ಆಫ್ ವೇದಿಕ್ ಸ್ಟಡೀಸ್ ನಿಕಾಯವೂ ಇದೆ. ಸಂಸ್ಕೃತದ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಈ ನಿಕಾಯವೂ ಸಹ ಅತ್ಯಂತ ಅವಶ್ಯಕವಾಗಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ – 2009ರ ಉಪಬಂಧ 14(1) ಮತ್ತು(2) ರಲ್ಲಿ ಕುಲಪತಿಗಳು ಪ್ರಾಧ್ಯಾಪಕರನ್ನು ನಿಕಾಯಾಧ್ಯಕ್ಷರನ್ನಾಗಿ ನೇಮಿಸಬಹುದು, ಒಂದು ವೇಳೆ ಪ್ರಾಧ್ಯಾಪಕರು ಲಭ್ಯವಿಲ್ಲದಿದ್ದಲ್ಲಿ ಕುಲಪತಿಗಳು ಡೀನ್ ರ ಅಧಿಕಾರವನ್ನು ಚಲಾಯಿಸಬಹುದು ಎಂದು ತಿಳಿಸಲಾಗಿದೆ. ಆದ್ದರಿಂದ ನಿಕಾಯದ ಬೆಳವಣಿಗೆಯ ದೃಷ್ಟಿಯಿಂದ ಡಾ. ವಿನಯ್ ಪಿ., ಸಹಾಯಕ ಪ್ರಾಧ್ಯಾಪಕರು, ವೇದಾಂತ ವಿಭಾಗ ಇವರನ್ನು ಫ್ಯಾಕಲ್ಟಿ ಆಫ್ ವೇದಿಕ್ ಸ್ಟಡೀಸ್ ನಿಕಾಯದ ಡೀನ್ ರಾಗಿ ಪ್ರಭಾರದಲ್ಲಿರಿಸುವ ಬಗ್ಗೆ ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಡಾ. ವಿನಯ್ ಪಿ., ಸಹಾಯಕ ಪ್ರಾಧ್ಯಾಪಕರು, ವೇದಾಂತ ವಿಭಾಗ ಇವರನ್ನು ಫ್ಯಾಕಲ್ಟಿ ಆಫ್ ವೇದಿಕ್ ಸ್ಟಡೀಸ್ ನಿಕಾಯದ ಡೀನ್‌ರಾಗಿ ಪ್ರಭಾರದಲ್ಲಿರಿಸಲು ಸಭೆಯು ಅನುಮೋದಿಸಿತು.** |
| **ವಿಷಯ 35** | **15ನೇ ರಾಷ್ಟ್ರೀಯ ಮಹಿಳಾ ವಿಜ್ಞಾನ ಸಮ್ಮೇಳನವನ್ನು ಆಯೋಜಿಸುವ ಬಗೆಗೆ.** |
| **ಟಿಪ್ಪಣಿ** | 'ಮಾತೃ ವೇದಿಕೆ' (ಮಹಿಳಾ ವಿಜ್ಞಾನ ವೇದಿಕೆ), ಸ್ವದೇಶಿ ವಿಜ್ಞಾನ ಆಂದೋಲನ-ಕರ್ನಾಟಕ –ಈ ಸಂಸ್ಥೆಯು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ಭಾರತರತ್ನ ಪ್ರಶಸ್ತಿ ಪುರಸ್ಕೃತ ಮತ್ತು ನೊಬೆಲ್ ಪ್ರಶಸ್ತಿ ವಿಜೇತ ಸರ್ ಸಿ.ವಿ. ರಾಮನ್ ಮತ್ತು ಖ್ಯಾತ ವಿಜ್ಞಾನಿ ಮತ್ತು ನೊಬೆಲ್ ಪ್ರಶಸ್ತಿ ವಿಜೇತೆ ಮೇಡಮ್ ಮೇರಿ ಕ್ಯೂರಿ ಜನ್ಮದಿನಾಚರಣೆಯ ಪ್ರಯುಕ್ತ, 15ನೇ ರಾಷ್ಟ್ರೀಯ ಮಹಿಳಾ ವಿಜ್ಞಾನ ಸಮ್ಮೇಳನವನ್ನು 2024ನೇ ನವೆಂಬರ್ 7-9ರ ವರೆಗೆ ವಿಶ್ವವಿದ್ಯಾಲಯದಲ್ಲಿ ಆಯೋಜಿಸುತ್ತಿದೆ.<br>ಈ ಸಮ್ಮೇಳನದಲ್ಲಿ ಭೌತ, ಗಣಿತ ಮತ್ತು ಜೈವಿಕವಿಜ್ಞಾನ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿದ ಭಾರತದ ಅತ್ಯುತ್ತಮ ಮಹಿಳಾ ವಿಜ್ಞಾನಿಗೆ ಪ್ರತಿಷ್ಠಿತ ಸರ್ ಸಿ.ವಿ. ರಾಮನ್ ಮಹಿಳಾ ವಿಜ್ಞಾನ ಪುರಸ್ಕಾರವನ್ನು ಹಾಗೂ ವಿಜ್ಞಾನದ ಇತರ ಕ್ಷೇತ್ರಗಳ ಅತ್ಯುತ್ತಮ ಮಹಿಳಾ ವಿಜ್ಞಾನಿಗೆ ಮೇಡಂ ಮೇರಿ ಕ್ಯೂರಿ ಮಹಿಳಾ ವಿಜ್ಞಾನ ಪುರಸ್ಕಾರವನ್ನು ಪ್ರದಾನ ಮಾಡಲಾಗುತ್ತದೆ. ಈ ಸ್ಮರಣೀಯ ಕಾರ್ಯಕ್ರಮವನ್ನು ಆಯೋಜಿಸಲು 5 ಲಕ್ಷ ರೂ.ಗಳ ಅಂದಾಜು ಮೊತ್ತಕ್ಕೆ ಅನುಮೋದನೆಯನ್ನು ಕೋರಿ ಪ್ರಶಾಸನ ಸಮಿತಿಯಲ್ಲಿ ವಿಷಯವನ್ನು ಮಂಡಿಸಿದೆ. |

| | |
|---|---|
| ನಿರ್ಣಯ | 15ನೇ ರಾಷ್ಟ್ರೀಯ ಮಹಿಳಾ ವಿಜ್ಞಾನ ಸಮ್ಮೇಳನವನ್ನು ಆಯೋಜಿಸಲು 5 ಲಕ್ಷ ರೂ.ಗಳ ಅಂದಾಜು ಮೊತ್ತಕ್ಕೆ ಸಭೆಯು ಅನುಮೋದಿಸಿತು. |
| **ವಿಷಯ 36** | **ಶ್ರೀ ಪ್ರಸನ್ನಕುಮಾರ ಪಿ., ಡಿ. ಗ್ರೂಪ್(ಜವಾನ), ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರ ವಿರುದ್ಧ ಕರ್ನಾಟಕ ನಾಗರಿಕ ಸೇವಾ ನಿಯಮದಂತೆ ಕ್ರಮ ಕೈಗೊಳ್ಳುವ ಕುರಿತು.** |
| ಟಿಪ್ಪಣಿ | ಶ್ರೀ ಪ್ರಸನ್ನಕುಮಾರ ಪಿ., ಡಿ. ಗ್ರೂಪ್ (ಜವಾನ) –ಇವರು 20.01.2020ರಿಂದ ಅನಧಿಕೃತವಾಗಿ ಸೇವೆಗೆ ಗೈರುಹಾಜರಾಗಿದ್ದು, ಈ ಬಗ್ಗೆ ಇವರ ವಿರುದ್ಧ ಅನುಬಂಧ 1-4 ಜಾರಿಗೊಳಿಸಿ, ಪತ್ರಿಕಾ ಪ್ರಕಟಣೆಯನ್ನು ನೀಡಿ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಆದೇಶಿಸಿ ನೋಟೀಸ್ ಜಾರಿ ಮಾಡಿ, ವಿಚಾರಣೆ ನಡೆಸಿ, ದಿನಾಂಕ: 19.09.2023ರಂದು ವಿಚಾರಣಾಧಿಕಾರಿಗಳು ಇಲಾಖಾ ವಿಚಾರಣೆಯ ವರದಿ ಸಲ್ಲಿಸಿದ್ದು, ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 18 ಸೇಇವಿ 2001, ದಿ: 14.09.2001ರ ಕಂಡಿಕೆ 02ರಂತೆ ಮತ್ತು ಸಿ.ಸಿ.ಎ. ನಿಯಮ 8(vii) ರಂತೆ ಕ್ರಮ ಕೈಗೊಳ್ಳುವ ಬಗ್ಗೆ 68ನೇ ಸಭೆಯಲ್ಲಿ ಮಂಡಿಸಲಾಗಿತ್ತು. ಸದರಿ ಸಭೆಯ ನಿರ್ಣಯದಂತೆ ಶ್ರೀ ಪ್ರಸನ್ನಕುಮಾರ ಪಿ., ಡಿ. ಗ್ರೂಪ್(ಜವಾನ) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರಿಗೆ ಕಾರಣ ಕೇಳುವ ನೋಟೀಸಿನೊಂದಿಗೆ ವಿಚಾರಣಾ ವರದಿಯ ಪ್ರತಿಯನ್ನು 2 ಬಾರಿ ನೋಂದಾಯಿತ ಅಂಚೆ ಮೂಲಕ ರವಾನಿಸಲಾಗಿದ್ದು, ಸದರಿಯವರಿಂದ ಸ್ವೀಕೃತವಾಗದೇ ವಾಪಸ್ಸಾಗಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ರ 22(16 ಮತ್ತು 17) ರಂತೆ ನೌಕರರ ನೇಮಕಾತಿ/ವಜಾ ಇತ್ಯಾದಿಗಳಿಗೆ ಪ್ರಶಾಸನ ಸಮಿತಿಯು ಸಕ್ಷಮ ಪ್ರಾಧಿಕಾರವಾಗಿರುವುದರಿಂದ ಸದರಿ ನೌಕರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಶ್ರೀ ಪ್ರಸನ್ನಕುಮಾರ ಪಿ., ಡಿ. ಗ್ರೂಪ್(ಜವಾನ), ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರನ್ನು ಕರ್ನಾಟಕ ನಾಗರಿಕ ಸೇವಾ ನಿಯಮ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) 1957ರ ಭಾಗ IV, 8(vii)ರಂತೆ ಸೇವೆಯಿಂದ ತೆಗೆದುಹಾಕಲು ಸಭೆಯು ತೀರ್ಮಾನಿಸಿತು.** |
| | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳು:** |
| **ವಿಷಯ 01** | **ಶ್ರೀ ಎಸ್. ರೇಣುಕಾರಾಧ್ಯ, ಪ್ರಾಧ್ಯಾಪಕರು, ಶ್ರೀ ಸಿದ್ಧಲಿಂಗೇಶ್ವರ ವೇದ-ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾಮಠ- ಇವರ ಅಮಾನತ್ತನ್ನು ತೆರವುಗೊಳಿಸಿ ಕರ್ತವ್ಯಕ್ಕೆ ಹಾಜರುಪಡಿಸಿಕೊಂಡು ನಿಯಮಾನುಸಾರ ಜೀವನ ನಿರ್ವಹಣಾ ಭತ್ಯೆಯನ್ನು ಮಂಜೂರು ಮಾಡುವ ಬಗ್ಗೆ.** |
| ಟಿಪ್ಪಣಿ | ಕ್ರಿಮಿನಲ್ ಪ್ರಕರಣವೊಂದರಲ್ಲಿ ಆರೋಪಿಯೆನ್ನಲಾದ ಶ್ರೀ ಎಸ್. ರೇಣುಕಾರಾಧ್ಯ, ಪ್ರಾಧ್ಯಾಪಕರು, ಶ್ರೀ ಸಿದ್ಧಲಿಂಗೇಶ್ವರ ವೇದ-ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾಮಠ- ಇವರ ಸೇವೆಯನ್ನು ಅಮಾನತ್ತಿನಲ್ಲಿರಿಸಲಾಗಿದೆ. ಇವರು ಅಮಾನತ್ತಿನಲ್ಲಿರಿಸಿದ ದಿನಾಂಕದಿಂದ ಜೀವನ ನಿರ್ವಹಣ ಭತ್ಯೆಯನ್ನು **(Subsistance Allowance)** ಪಡೆಯಲು ಅರ್ಹರಿರುತ್ತಾರೆ. ಇವರ ಅಮಾನತ್ತನ್ನು ತೆರವುಗೊಳಿಸಿ ಕರ್ತವ್ಯಕ್ಕೆ ಹಾಜರುಪಡಿಸಿಕೊಂಡು ನಿಯಮಾನುಸಾರ ಜೀವನ ನಿರ್ವಹಣಾ ಭತ್ಯೆಯನ್ನು ಮಂಜೂರು ಮಾಡಲು ಪ್ರಶಾಸನ ಸಮಿತಿಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಶ್ರೀ ಎಸ್. ರೇಣುಕಾರಾಧ್ಯ, ಪ್ರಾಧ್ಯಾಪಕರು, ಶ್ರೀ ಸಿದ್ಧಲಿಂಗೇಶ್ವರ ವೇದ-ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾಮಠ- ಇವರಿಗೆ ಅಮಾನತ್ತಿನ ಅವಧಿಯಲ್ಲಿ ಮೊದಲ ಆರು ತಿಂಗಳು ಜೀವನ ನಿರ್ವಹಣಾ ಭತ್ಯೆಯನ್ನು ಪಾವತಿಸಬೇಕು. ಕರ್ನಾಟಕ ಶಿಕ್ಷಣ ಕಾಯ್ದೆ 1983 ರಂತೆ ಅನುದಾನಿತ ಸಂಸ್ಥೆಗಳ ಸಿಬ್ಬಂದಿಗಳಿಗೆ ಆರು ತಿಂಗಳ ನಂತರ ಆಡಳಿತ ಮಂಡಳಿಯೇ ಜೀವನ ನಿರ್ವಹಣಾ ಭತ್ಯೆಯನ್ನು ಪಾವತಿಸಬೇಕು. ಹಾಗೂ ಸಕ್ಷಮ ಪ್ರಾಧಿಕಾರವು ಇಲಾಖಾ ವಿಚಾರಣೆಯನ್ನು ಕೈಗೊಳ್ಳಬೇಕು. ಆದ್ದರಿಂದ ಈ ಬಗ್ಗೆ ಆಡಳಿತ ಮಂಡಳಿಗೆ ಸೂಚಿಸಲು ಸಭೆಯು ತೀರ್ಮಾನಿಸಿತು.** |

| | |
|---|---|
| ವಿಷಯ 02 | **ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳಿಗೆ ಪದೋನ್ನತಿ ನೀಡುವ ಕುರಿತು.** |
| ಟಿಪ್ಪಣಿ | ವಿಶ್ವವಿದ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೆಲವು ಬೋಧಕೇತರ ಸಿಬ್ಬಂದಿಗಳು ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮಾನುಸಾರ ಪದೋನ್ನತಿ ಪಡೆಯಲು ಅರ್ಹರಿರುತ್ತಾರೆ. ಅರ್ಹ ಸಿಬ್ಬಂದಿಗಳಿಗೆ ಪದೋನ್ನತಿ ನೀಡುವ ಕುರಿತು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳಿಗೆ ಪದೋನ್ನತಿ ನೀಡುವ ಬಗ್ಗೆ ಇಲಾಖಾ ಪದೋನ್ನತಿ ಸಮಿತಿಯನ್ನು ರಚಿಸಿ ಸಮಿತಿಯ ತೀರ್ಮಾನದಂತೆ ಕ್ರಮವಹಿಸಲು ತೀರ್ಮಾನಿಸಲಾಯಿತು.** |
| ವಿಷಯ 03 | ವಿದ್ವಾನ್ ನಾರಾಯಣ ಭಟ್ಟ, ಸಾಹಿತ್ಯ ಸಹಾಯಕರು, ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು, ಸುಬ್ರಹ್ಮಣ್ಯ, ಸುರಕಟ್ಟೆ ಅಂಚೆ, ಹೊನ್ನಾವರ ತಾ॥ ಉತ್ತರ ಕನ್ನಡ ಜಿಲ್ಲೆ॥ ಇವರಿಗೆ ಹಿರಿಯ ಪ್ರಾಧ್ಯಾಪಕ ಹುದ್ದೆಗೆ ಮುಂಬಡ್ತಿ ನೀಡುವ ಬಗೆಗೆ. |
| ಟಿಪ್ಪಣಿ | ವಿದ್ವಾನ್ ನಾರಾಯಣ ಭಟ್ಟ, ಇವರು ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು, ಸುಬ್ರಹ್ಮಣ್ಯ, ಸುರಕಟ್ಟೆ ಅಂಚೆ, ಹೊನ್ನಾವರ ತಾ॥ ಉತ್ತರ ಕನ್ನಡ ಜಿಲ್ಲೆ – ಇಲ್ಲಿ ದಿನಾಂಕ: 29.04.2015 ರಿಂದ ಅನುದಾನ ಸಹಿತವಾಗಿ ಸಾಹಿತ್ಯ ಸಹಾಯಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸದರಿ ಸಂಸ್ಥೆಯ ಆಡಳಿತ ಮಂಡಳಿಯು ದಿನಾಂಕ:20.01.2023 ರಂದು ಸಭೆ ನಡೆಸಿ, ವಿದ್ವಾನ್ ನಾರಾಯಣ ಭಟ್ಟ, ಇವರಿಗೆ ಹಿರಿಯ ಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಿ ಠರಾವು ಮಾಡಿ, ಅನುದಾನ ಸಂಹಿತೆ ನಿಯಮ, ಅಪೆಂಡಿಕ್ಸ್-IV-34(5)ರಲ್ಲಿ ಸಂಸ್ಕೃತ ಪ್ರಥಮಾದಿಂದ ವಿದ್ವದುತ್ತಮಾ ತರಗತಿಯಿರುವ ಸಂಸ್ಕೃತ ಕಾಲೇಜುಗಳಿಗೆ 1 ಹಿರಿಯ ಪ್ರಾಧ್ಯಾಪಕರ ಹುದ್ದೆಯಿರುವುದರಿಂದ ಸದರಿಯವರಿಗೆ ಹಿರಿಯ ಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ ನೀಡಲು ಕೋರಿ ದಿನಾಂಕ: 17.7.2023 ರಂದು ಪ್ರಸ್ತಾವನೆಯನ್ನು ಸಲ್ಲಿಸಿದೆ. ಸದರಿ ವಿಷಯವನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ವಿದ್ವಾನ್ ನಾರಾಯಣ ಭಟ್ಟ, ಸಾಹಿತ್ಯ ಸಹಾಯಕರು, ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು, ಸುಬ್ರಹ್ಮಣ್ಯ, ಸುರಕಟ್ಟೆ ಅಂಚೆ, ಹೊನ್ನಾವರ ತಾ॥ ಉತ್ತರ ಕನ್ನಡ ಜಿಲ್ಲೆ॥ ಇವರಿಗೆ ಹಿರಿಯ ಪ್ರಾಧ್ಯಾಪಕ ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯು ತೀರ್ಮಾನಿಸಿತು.** |
| ವಿಷಯ 04 | **2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ತನ್ನ ಹಣಕಾಸಿನ ವಹಿವಾಟನ್ನು Tally ತಂತ್ರಾಂಶದ ಮೂಲಕ ಹಣಕಾಸು ವ್ಯವಹಾರಗಳನ್ನು ಮಾಡುತ್ತಿದೆ. ಹಣಕಾಸಿನ ವ್ಯವಹಾರಗಳನ್ನು ಇ-ಟೆಂಡರ್ ಮೂಲಕ ಆಯ್ಕೆಯಾಗಿರುವ M/S. D.N Joshi & Co. ಇವರಿಂದ ನಿರ್ವಹಿಸಲಾಗುತ್ತಿದೆ. ಸದರಿಯವರು 2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು (Balance Sheet, Receipts & Payment and Income & Expenditure) ಸಿದ್ಧಪಡಿಸಿ ಸಲ್ಲಿಸಿದ್ದಾರೆ. ಸಲ್ಲಿಸಿರುವ ವಾರ್ಷಿಕ ಲೆಕ್ಕಪತ್ರಗಳನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಸಭೆಯು ಅನುಮೋದಿಸಿತು.** |

**ಶ್ರೀ ವಿಶ್ವನಾಥ ಪಿ. ಹಿರೇಮಠ, ಕ.ಆ.ಸೇ.**
ಕುಲಸಚಿವರು
**ಸದಸ್ಯ ಕಾರ್ಯದರ್ಶಿಗಳು**

**ಡಾ. ಅಹಲ್ಯಾ ಎಸ್.**
ಕುಲಪತಿಗಳು
**ಅಧ್ಯಕ್ಷರು**